ತುಂಬಿದೆ ಇದರಲ್ಲಿ ಯಾವುದೇ ಒಂದು ಕ್ಲಿಯರ್‌ಕಟ್ ಪಾಲಿಸಿ ಇಲ್ಲ ಸರ್ಕಾರದ ಸ್ಪಷ್ಟವಾದ ನೀತಿ ಇಲ್ಲ ನನಗೆ ಗೊತ್ತಿದೆ ತಾವು ಇನ್ನು ಐದಾರು ತಿಂಗಳು ಅಧಿಕಾರದಲ್ಲಿರಬಹುದು. ಚುನಾವಣೆಗೆ ನಾವು ಹೋಗಬೇಕಾಗುತ್ತದೆ. ಜನರು ಏನು ತೀರ್ಪು ಕೊಡುತ್ತಾರೋ ಗೊತ್ತಿಲ್ಲ ನಾವು ಅಧಿಕಾರಕ್ಕೆ ಬರುತ್ತೇವೆಂದು ನಾವು ಹೇಳುತ್ತೇವೆ ತಾವು ಅಧಿಕಾರಕ್ಕೆ ಬರುತ್ತೇವೆಂದು ತಾವು ಹೇಳುತ್ತೀರಿ ಅದು ಜನರು ಕೊಡತಕ್ಕಂಥ ತೀರ್ಪಿನ ಮೇಲೆ ನಿರ್ಣಯವಾಗುತ್ತದೆ. ತಾವು ರಾಜ್ಯಪಾಲರ ಭಾಷಣದಲ್ಲಿ ತಮ್ಮ ಅಚೀವ್‌ಮೆಂಟ್ ಬಗ್ಗೆ ಏನನ್ನು ಹೇಳಿಲ್ಲ ತಮ್ಮ ಗುರಿಗಳ ಬಗ್ಗೆ ಪುನಃ ಪ್ರಸ್ತಾಪ ಮಾಡುತ್ತಾ ಬಂದಿದ್ದೀರಿ ವಿನಃ 4 ವರ್ಷಗಳಿಂದ ಅಚೀವ್‌ಮೆಂಟ್ ಏನು ಮಾಡಿದ್ದೀರಿ ಅದರ ಬಗ್ಗೆ ಏನೂ ಹೇಳಲಿಲ್ಲ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರಾಜ್ಯಪಾಲರ ಭಾಷಣ ಅಂದರೆ ಕೇವಲ ರಾಜ್ಯಪಾಲರ ಮುಖಾಂತರ ಪೊಳ್ಳು ಘೋಷಣೆಗಳ ಭಾಷಣವಾಗಿದೆ ಆದ್ದರಿಂದ ಅದರಲ್ಲಿ ಯಾವ ಪಾಲಿಸಿ ಇಲ್ಲ ಎಂದು ಹೇಳಿ ಇದನ್ನು ನಾನು ವಿರೋಧಿಸುತ್ತಾ ಮಾನ್ಯ ಅಧ್ಯಕ್ಷರು ಇಷ್ಟೊಂದು ಸಮಯವನ್ನು ನನಗೆ ಮಾತನಾಡಲಿಕ್ಕೆ ಕೊಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳುತ್ತೇನೆ

ವಿತ್ತೀಯ ಕಾರ್ಯಕಲಾಪಗಳು

1993-94ನೇ ಸಾಲಿನ ಅನುಪೂರಕ ಅಂದಾಜುಗಳ ಮೇಲಿನ ಚರ್ಚೆ.

ಅಧ್ಯಕ್ಷರು : ಈಗ 1993-94ನೇ ಸಾಲಿನ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಮೊದಲನೇ ಕಂತು ಹಾಗೂ ಎರಡನೇ ಕಂತುಗಳ) ಮೇಲೆ ಮುಂದುವರೆದ ಚರ್ಚೆ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಾನ್ಯ ಏಕಾಂತಯ್ಯನವರು ಅರ್ಧದಲ್ಲೇ ತಮ್ಮ ಭಾಷಣವನ್ನು ನಿಲ್ಲಿಸಿದ್ದರು. ಈಗ ಅವರು ಮಾತನಾಡಬೇಕು.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಈ ಪೂರಕ ಅಂದಾಜುಗಳ 2ನೇ ಕಂತು ಏನಿತ್ತು ಅದರ ಬಗ್ಗೆ ಮಾತನಾಡುತ್ತಾ ಮೊಲ್ಯಾಸಿಸ್ ಕಂಟ್ರೋಲ್ ಆರ್ಡರನ್ನು ಡಿ ಕಂಟ್ರೋಲ್ ಮಾಡಿದ್ದರಿಂದ ಈ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಏನು ಪರಿಣಾಮ ಉಂಟಾಯಿತೆಂಬುದನ್ನು ಹೇಳುತ್ತಿದ್ದೇನೆ ಅದನ್ನು ಮುಂದುವರಿಸುತ್ತಾ ಇನ್ನು ಕೆಲವು ವಿಚಾರಗಳನ್ನು ಮಾತ್ರ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಸುಮಾರು 700 ಕೋಟಿ ರೂ.ಗಳನ್ನು ಬೇಡಿಕೆ ಸಂಖ್ಯೆ 25 ರಲ್ಲಿ ಸರ್ಕಾರ ಈ ಸಭೆಯ ಮುಂದಿಟ್ಟಿದೆ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ತಮಗೆ ತಿಳಿದಿರುವಂತೆ ಡಿ ಕಂಟ್ರೋಲ್ ಆದಮೇಲೆ ಹಿಂದೆ 150-200 ರೂ. ಇದ್ದುದು ಇವತ್ತು ಮಹಾರಾಷ್ಟ್ರದಲ್ಲಿ 2500 ರೂ. ಆಗಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ 1600 ರೂ.ನಿಂದ 1700 ರೂ.ವರೆಗೆ ಇದೆ. ತಮಗೆ ಗೊತ್ತಿರುವಂತೆ ಕರ್ನಾಟಕ ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳಾಗಿರಬಹುದು, ಅಥವಾ ಬೇರೆ ಸಕ್ಕರೆ ಕಾರ್ಖಾನೆಗಳೇನಿವೆ ಅವು ಮೊಲ್ಯಾಸಿಸ್ಸು ಉತ್ಪಾದನೆ ಮಾಡುತ್ತಿವೆ.

ಈ ರೀತಿ ಉತ್ಪಾದನೆಯಾದುದು ಖರ್ಚಾಗದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಪಕ್ಕದ ಮಹಾರಾಷ್ಟ್ರದಲ್ಲಿ 2500 ರೂ.ಗಳಿಗೆ ಮಾರಾಟವಾಗುತ್ತಿದ್ದರೆ ನಮ್ಮ ಕರ್ನಾಟಕದಲ್ಲಿ ಇವತ್ತಿನ ದಿವಸ ಮಾನ್ಯ ಮಂತ್ರಿಗಳಾದ ಲಮಾಣಿಯವರು ಹೇಳಿದಂತೆ ಅವರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿರುವಂಥ ಮೊಲ್ಯಾಸಿಸ್ಸು ತೆಗೆದುಕೊಳ್ಳುವುದಕ್ಕೆ ಜನ

ಇಲ್ಲ ನಾವೇನು ಮಾಡಬೇಕೆಂದು ಚರ್ಚೆ ಮಾಡುತ್ತಿದ್ದರು. ಈ ರೀತಿ ಏತಕ್ಕೆ ಆಯಿತು? ಇವತ್ತು ಸಹಕಾರಿ ಸಕ್ಕರೆ ಕಾರ್ಖಾನೆ ಇರಬರುದು, ಬೇರೆ ಸಕ್ಕರೆ ಕಾರ್ಖಾನೆಗಳಿರಬಹುದು, ಮೊಲ್ಯಾಸಿಸ್ಸ್‌ನ್ನು ಸ್ಟೋರ್ ಮಾಡುವಂಥ ಟ್ಯಾಂಕ್ಗಳೇನಿವೆ ಅವುಗಳನ್ನೂ ನಿರ್ಮಾಣ ಮಾಡಿಲ್ಲ. ಇದರಿಂದಾಗಿ ಮೊಲ್ಯಾಸಿಸನ್ನು ಉಪಯೋಗಿಸುವಂಥ ಡಿಸ್ಟಿಲರ್ಸ್ ಯಾರಿದ್ದಾರೆ ಅವರ ಅನುಗ್ರಹದಲ್ಲಿ ಈ ಸಕ್ಕರೆ ಕಾರ್ಖಾನೆಗಳು ಇರಬೇಕಾಗಿದೆ. ಇದು ತಪ್ಪಬೇಕು. ಈ ಒಂದು ಪ್ರಮುಖ ಕಾರಣವನ್ನು ತಿಳಿದುಕೊಂಡಿರುವ ಪ್ರೈವೇಟ್ ಡಿಸ್ಟಿಲರೀಸ್ ಓನರ್ಸ್ ಅಂದರೆ ಬಂಡವಾಳಶಾಹಿಗಳು ಯಾರಿದ್ದಾರೆ ಇವರು ಇದನ್ನು ದುರುಪಯೋಗಪಡಿಸಿಕೊಂಡು ಟೆಂಡರ್‌ನ್ನು ಕಡಿಮೆ ಬೆಲೆಗೆ ಹಾಕುತ್ತಿರುವುದನ್ನು ನೋಡುತ್ತಿದ್ದೇವೆ. ಆದ್ದರಿಂದ ಸಂಬಂಧಪಟ್ಟ ಸಹಕಾರಿ ಸಕ್ಕರೆ ಕಾರ್ಖಾನೆಗಳು ಮತ್ತಿತರ ಕಾರ್ಖಾನೆಗಳು ಈ ಮೊಲ್ಯಾಸಿಸ್ಸ್‌ನ್ನು ಸ್ಟೋರ್ ಮಾಡುವಂಥ ಟ್ಯಾಂಕ್‌ಗಳನ್ನು ನಿರ್ಮಿಸಿಕೊಳ್ಳಲು ಸೂಚನೆ ಕೊಡಬೇಕು ಮತ್ತು ಇದಕ್ಕೆ ಅಗತ್ಯವಾದ ಧನಸಹಾಯವನ್ನು ಕೂಡ ಸರ್ಕಾರ ಮಾಡಬೇಕಾಗಿದೆ.

ಈ ಸಂದರ್ಭದಲ್ಲಿ ನಾನು ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನಮ್ಮ ಸಂವಿಧಾನದ 246ನೇ ವಿಧಿಯ ಪ್ರಕಾರ ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರಗಳು ಡಿಸ್ಟ್ರಿಬ್ಯೂಷನ್ ಆಫ್ ಲೆಜಿಸ್ಲೇಟಿವ್ ಪವರ್ಸ್ ಅಡಿಯಲ್ಲಿ ನಾವು ಕೆಲವು ಪಟ್ಟಿಯನ್ನು ಮಾಡಿಕೊಂಡಿದ್ದೇವೆ. ಆ ಪಟ್ಟಿಯ ಪ್ರಕಾರ ಏನು ಯೂನಿಯನ್ ಲಿಸ್ಟ್ ಇದೆ, ಸ್ಟೇಟ್ ಲಿಸ್ಟ್ ಇದೆ ಇವುಗಳನ್ನು ಮಾಡಿದ್ದಾರೆ. ಈ ಮದ್ಯಸಾರ ಇರತಕ್ಕದ್ದು ಇಂಡಸ್ಟ್ರಿಯಲ್ ಪರ್ಪಸ್ ಗೋಸ್ಕರ. ಆದರೆ ಇದಕ್ಕೆ ಎಕ್ಸೈಜ್ 'ಡ್ಯೂಟಿಯನ್ನು ಹಾಕತಕ್ಕ ಅಧಿಕಾರವಿಲ್ಲ. ಈ ಮಧ್ಯಸಾರವನ್ನು ಮಾನವನು ಉಪಯೋಗಿಕಸುವಂಥ ಪಾನೀಯಕ್ಕಾಗಿ ಮಾಡಲು ಉಪಯೋಗಿಸಿಕೊಂಡಾಗ ಇಂಥ ಮಧ್ಯಾಸಾರದ ಮೇಲೆ ಅಬ್ಕಾರಿ ಸುಂಕವನ್ನು ಹಾಕುವಂಥ ನಿಯಮ ಇದೆ. ಇವತ್ತಿನ ದಿವಸ ಅನೇಕ ರಾಜ್ಯ ಸರ್ಕಾರಗಳು ಇದರ ಬಗ್ಗೆ ವಾದ ವಿವಾದಗಳನ್ನು ಮಾಡುತ್ತಾ ಸುಪ್ರೀಂ ಕೋರ್ಟ್ಗೆ ತೆಗೆದುಕೊಂಡು ಹೋಗಿದ್ದಾರೆ. ಆ ಸುಪ್ರೀಂ ಕೋರ್ಟ್ನಲ್ಲೂ ಕೂಡ ಇನ್ನೂ ಗೊಂದಲವಿದೆ.

ಅದು ಏನೇ ಇರಲಿ ಈ ಗೊಂದಲವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಈ ರಾಜ್ಯಗಳ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಇವತ್ತು ನಾವು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಬೇಕಾಗಿದೆ. ಈ ಆಲ್ಕೋಹಾಲ್ ಏನಿದೆ ಇದು ಇಂಡಸ್ಟ್ರಿಯಲ್ ಪರ್ಪಸ್ಗೋಸ್ಕರ ಇರಬಹುದು, ಅಥವಾ ಮಾದಕ ಪಾನೀಯಗಳನ್ನು ತಯಾರಿಸಲು ಉಪಯೋಗಿಸಿದರೂ ಕೂಡ ಇದರ ಮೇಲೆ ಅಬ್ಕಾರಿ ಸುಂಕವನ್ನು ವಿಧಿಸಲು ನಮಗೆ ಅಧಿಕಾರವನ್ನು ಕೊಡಿ ಎಂದು ಕೇಳುವುದರ ಮೂಲಕ ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಈ ಕಾರಣದಿಂದ ನಮ್ಮ ರಾಜ್ಯಸರ್ಕಾರದವರು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ಹೇಳ ಬಯಸುತ್ತೇನೆ. ನಾನು ಈಗಾಗಲೇ ಹೇಳಿದಂತೆ ಜುಲೈ 10 ರಂದು ಡಿ ಕಂಟ್ರೋಲ್ ಆರ್ಡರ್ ಬಂದಮೇಲೆ ನಮ್ಮ ಸರ್ಕಾರ ಹಿಂದೆ ಮಾಡಿದಂಥ ತಪ್ಪಿನಿಂದಾಗಿ, ಅವತ್ತು ಮಾಡಿಕೊಂಡ ಕರಾರಿನಿಂದಾಗಿ ಇವತ್ತಿನ ದಿವಸ ಸಾರಾಯಿ ತಯಾರಿಸುವಂಥ ಜನರಿಗೆ ಮದ್ಯಸಾರವನ್ನು ನಿಗದಿತ ಬೆಲೆಗೆ ಕೊಡುವಂಥ ಒಂದು ನಿಬಂಧನೆಗೆ ಒಪ್ಪಿದ್ದರಿಂದ ನಾವು ಈ ದಿಸೆಯಲ್ಲಿ ಹೆಚ್ಚು ಹಣವನ್ನು ಕೊಡಬೇಕಾಗಿದೆ.

ಇದಕ್ಕಿಂತ ಹೆಚ್ಚಾಗಿ ಇವತ್ತು ಸರ್ಕಾರಿ ಸಂಸ್ಥೆಗಳಾದ ಎಂ.ಎಸ್.ಐ.ಎಲ್. ಇರಬಹುದು. ಮೈ ಷುಗರ್ ಕಂಪನಿ ಇರಬಹುದು, ಅವರು ಈ ಸ್ಯಾಚೆಟ್ಗಳನ್ನು ತಯಾರಿಸುತ್ತಿದ್ದಾರೆ. ಈ ಸ್ಯಾಚೆಟ್ಗಳು ನಮ್ಮ ರಾಜ್ಯದಲ್ಲಾಗಲಿ, ಪಕ್ಕದ ರಾಜ್ಯವಾದ ಆಂಧ್ರದಲ್ಲಾಗಲಿ ಉಪಯೋಗವಾಗುತ್ತಿಲ್ಲ ಇವತ್ತು ಕಳ್ಳತನದಲ್ಲಿ ಸಾರಾಯಿಯನ್ನು ತಯಾರಿಸುವ ಖಾಸಗಿಯವರು ಈ ಮೈ ಷುಗರ್ ಕಂಪನಿಯವರು, ಎಂ.ಎಸ್.ಐ.ಎಲ್. ನವರು ಏನು ತಯಾರಿಸುತ್ತಿದ್ದಾರೆ

ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸ್ಯಾಚೆಟ್ಗಳನ್ನು ಅನಧಿಕೃತವಾಗಿ ಮಾಡುವುದರ ಮುಖಾಂತರ, ಕಳ್ಳಪೇಟೆಯಲ್ಲಿ ಮಾಡುವುದರ ಮುಖಾಂತರ ಈ ರಾಜ್ಯದ ಬೊಕ್ಕಸಕ್ಕೆ ನಷ್ಟವುಂಟು ಮಾಡುತ್ತಿದ್ದಾರೆ. ಇದನ್ನು ಸರಿಪಡಿಸಬೇಕಾದರೆ ಈ ಕಳ್ಳತನದಲ್ಲಿ ಉತ್ಪಾದನೆ ಮಾಡತಕ್ಕ, ಸಾಗಾಣಿಕೆ ಮಾಡತಕ್ಕ ಜನ ಯಾರಿದ್ದಾರೆ ಅವರ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಈ ಕೆಲಸವನ್ನು ತಾವು ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಎಲ್ಲಾ ಬೇಡಿಕೆಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಹಿಂದೆ ವಿವರವಾಗಿ ಕೆಲವಾರು ಬೇಡಿಕೆಗಳ ಬಗ್ಗೆ ಮಾಡಿದ್ದೇನೆ.

ಮತ್ತೊಂದು ಮುಖ್ಯವಾದ ಬೇಡಿಕೆ ಸಂಖ್ಯೆ 33. ಸುಮಾರು 500 ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜಿನಲ್ಲಿ ಸೇರಿಸಿ ನಮ್ಮ ಅನುಮತಿಗೋಸ್ಕರ ಕೇಳುತ್ತಿದ್ದಾರೆ. ಇದು ಯಾವುದು ಎಂದರೆ 1993-94ರಲ್ಲಿ ಹೋದ ಸಾರಿ ರಾಜ್ಯಪಾಲರ ಭಾಷಣದ ಮುಖಾಂತರ ಒಂದು ಹೊಸ ಯೋಜನೆಗಳನ್ನು ತಂದರು. 'ನೆರಳಿನ ಭಾಗ್ಯ' ಎನ್ನುವಂತಹ ಯೋಜನೆಯನ್ನು ತಂದರು. ಈ ಯೋಜನೆಯ ಅಡಿಯಲ್ಲಿ ಸುಮಾರು 9 ಜಿಲ್ಲೆಗಳಲ್ಲಿ ಸುಮಾರು 16,666 ಮನೆಗಳಿಗೆ ಸುಮಾರು 3000 ರೂಪಾಯಿಗಳಿಗೆ ಒಂದರಂತೆ ನಾವು ಹಂಚನ್ನು ಕೊಡುತ್ತೇವೆ, ನಾವು ಬಡವರಿಗೆ ಮನೆಗಳನ್ನು ಕಟ್ಟಿಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ಪೈಕಿ ಈಗಾಗಲೇ 250 ಕೋಟಿ ರೂಪಾಯಿಗಳನ್ನು ಸಾಧಿಲ್ವಾರು ನಿಧಿಯಿಂದ ಬಿಡುಗಡೆ ಮಾಡಿದ್ದಾರೆ ಎನ್ನುವ ಮಾತನ್ನು ಇಲ್ಲಿ ಹೇಳುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಬಯಸುತ್ತಿದ್ದೇನೆ. ಇದು ಕೇವಲ ಪುಸ್ತಕದಲ್ಲಿ ಮತ್ತು ನಿಮ್ಮ ಆಯವ್ಯಯದಲ್ಲಿ ಮಾತ್ರ ಇದೆ. ಆದ್ದರಿಂದ ಇವತ್ತಿನ ದಿವಸ ನನಗೆ ಆ ಅಂಕಿಅಂಶಗಳನ್ನು ಕೊಡಿ ಎಂದು ಕೇಳುತ್ತಿದ್ದೇನೆ. ನಿಜವಾಗಿಯೂ ಸಹ ಈ ದೇಶದ ಬಡವರಿಗೆ ಏನಾದರೂ ಅನುಕೂಲ ಆಗಬೇಕಾಗಿದ್ದರೆ ಈ ಯೋಜನೆಗಳು ಎಷ್ಟರಮಟ್ಟಿಗೆ ಜಾರಿ ಆಗಿವೆ ಎಂಬುದನ್ನು ಇವತ್ತು ನಮಗೆ ದಯವಿಟ್ಟು ತಿಳಿಸಬೇಕು. ಏನು 500 ಕೋಟಿ ರೂಪಾಯಿಗಳನ್ನು ಇವತ್ತಿನ ದಿವಸ ಇದರಲ್ಲಿ ಇಟ್ಟಿದ್ದೀರಿ, ಅದರಲ್ಲಿ ಈಗಾಗಲೇ ತಾವು 250 ಕೋಟಿ ರೂಪಾಯಿಗಳನ್ನು ತಾವು ಬಿಡುಗಡೆ ಮಾಡಿದ್ದೀರಿ, ಅದರಲ್ಲಿ ಸುಮಾರು 16,666 ಮನೆಗಳನ್ನು ಕಟ್ಟಬೇಕೆಂದು ಹೇಳಿದ್ದೀರಿ, ಅದರಲ್ಲಿ ಎಷ್ಟು ಮನೆಗಳನ್ನು ಈಗ ನಿರ್ಮಾಣ ಮಾಡಿದ್ದೀರಿ? ಎಷ್ಟು ಮನೆಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ? ಬಿಡುಗಡೆಯಾದ ಹಣದಲ್ಲಿ ಎಷ್ಟು ಹಣವನ್ನು ಈ ಬಡವರಿಗೆ ಸೇರುವಂತಹ ರೀತಿಯಲ್ಲಿ ಇವತ್ತಿನ ದಿವಸ ಖರ್ಚು ಆಗಿದೆ? ಎಂಬ ಒಂದು ವಿವರ ಕೊಟ್ಟಾಗ ಅದರ ಬಗ್ಗೆ ನಮಗೆ ವಿಶ್ವಾಸ ಮೂಡುತ್ತದೆ, ಇಲ್ಲದಿದ್ದರೆ ಇದು ಕೇವಲ ಒಂದು ಗುಡಿಸಲಾಗಿ ಉಳಿಯುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದೇ ರೀತಿಯಾಗಿ ಇವತ್ತಿನ ದಿವಸ ಮತ್ತೊಂದು 10 ಕೋಟಿ ರೂಪಾಯಿಗಳನ್ನು ಕರ್ನಾಟಕ ಹೌಸಿಂಗ್ ಬೋರ್ಡ್‌ಗೆ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಒಂದು ಗ್ಯಾರಂಟಿಯನ್ನು ಕೊಟ್ಟಿದೆ. ಆ ಬಗ್ಗೆ 8 ಕೋಟಿ ರೂಪಾಯಿಗಳನ್ನು ಅವರು ಹೆಚ್ಡಿಎಫ್ಸಿನಿಂದ ಅವರು ಪಡೆದರು. ಪಡೆದಂತಹ ಸಾಲಕ್ಕೆ ಇವತ್ತು ಸುಮಾರು 2 ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಇವತ್ತು ಪಾವತಿ ಮಾಡುವುದಕ್ಕೆ ನಮ್ಮ ಮುಂದೆ ಬಂದಿದ್ದಾರೆ.

ತಾವು ಏನು ಸುಮಾರು 8 ಕೋಟಿ ರೂಪಾಯಿ ಹಣವನ್ನು ಪಡೆದಿದ್ದೀರಿ. ಆ ಹಣ ಎಷ್ಟರ ಮಟ್ಟಿಗೆ ಯಾವ ಉದ್ದೇಶಕ್ಕೋಸ್ಕರ ತಾವು ಪಡೆದಿದ್ದೀರಿ ಆ ಉದ್ದೇಶವನ್ನು ತಾವು ಎಷ್ಟರಮಟ್ಟಿಗೆ ಕಾರ್ಯಗತ ಮಾಡಲಿಕ್ಕೆ ಸಾಧ್ಯವಾಗಿದೆ? ಇವತ್ತು ಎಷ್ಟು ಸಾವಿರ ಮನೆಗಳನ್ನು ಕಟ್ಟಲಿಕ್ಕೆ ತಾವು ಪ್ರಯತ್ನ ಮಾಡಿದ್ದೀರಿ? ಆ ಮನೆಗಳ ಪೈಕಿ ಎಷ್ಟು ಸಾವಿರ ಮನೆಗಳು ಇವತ್ತು ಮುಕ್ತಾಯ ಆಗಿವೆ ಮತ್ತು ಹಣ ಎಲ್ಲಿದೆ

ಎಂಬುದನ್ನು ಹೇಳಬೇಕಾಗಿದೆ. ನಿಜ, ಈ ವಿಚಾರದಲ್ಲಿ ಹೇಳುವಾಗ ಕೆಲವಾರು ವ್ಯಕ್ತಿಗಳನ್ನು ನಾವು ಗಮನದಲ್ಲಿ ಇಟ್ಟುಕೊಂಡು ಹೇಳುತ್ತಾ ಇಲ್ಲ. ಈ ಯೋಜನೆಯನ್ನು ಬಡ ಜನರಿಗೋಸ್ಕರ ನಾವು ಮಾಡುತ್ತೇವೆಂದು ಏನು ಸರ್ಕಾರದವರು ಹೇಳಿದರು, ಇವತ್ತು ನಾನು ಕೇಳುತ್ತಿದ್ದೇನೆ ಸುಮಾರು 10 ತಿಂಗಳ ನಂತರ ಇವತ್ತಿನ ದಿವಸ 8 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆನ್ನುವ ಮಾತನ್ನು ತಾವು ಏನು ಹೇಳಿದ್ದೀರಿ, ಆ 8 ಕೋಟಿ ರೂಪಾಯಿಗಳು ಯಾರ್‍ಯಾರಲ್ಲಿ, ಯಾವ ಯಾವ ರೀತಿಯಲ್ಲಿ ಖರ್ಚು ಆಗಿದೆ, ಅದರ ವಿವರವನ್ನು ಈ ಸಭೆಯ ಮುಂದೆ ಇಡಬೇಕು. ಇದರಲ್ಲಿ ಇರುವ ದೊಡ್ಡ ಕಥೆಯನ್ನು ಇಲ್ಲಿ ವಿಸ್ತಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಆ ಧೈರ್ಯವನ್ನು ಅವರು ಮಾಡುತ್ತಾರೆ ಎಂದು ನಂಬಿ ಮತ್ತೊಂದು ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತೇನೆ. ಇನ್ನೊಂದು ಮುಖ್ಯವಾದುದು ಎಂದರೆ, ಮಂತ್ರಿಮಂಡಲದ ಸಚಿವಾಲಯದಲ್ಲಿ ಕಚೇರಿ ವೆಚ್ಚಕ್ಕಾಗಿ ದೀಪ ಮತ್ತು ನೀರಿನ ಬಗ್ಗೆ ಈ ಒಂದು ವರ್ಷದಲ್ಲಿ ಏನು ಬಜೆಟ್ನಲ್ಲಿ ಇತ್ತು ಆ ಹಣಕ್ಕಿಂತ ಒಂದು ಕೋಟಿ 25 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಈ ಪೂರಕ ಅಂದಾಜುಗಳ ಬಗ್ಗೆ ನಮ್ಮ ಒಪ್ಪಿಗೆಗೆ ಇಟ್ಟಿದ್ದಾರೆ. ಇಷ್ಟು ಹಣವನ್ನು ಖರ್ಚು ಮಾಡುವ ಅಗತ್ಯ ಇದೆಯೆ? ಇದು ಇಷ್ಟು ಖರ್ಚು ಮಾಡುವುದಿದ್ದರೆ ನಿಜಕ್ಕೂ ಸಹಾ ಸರ್ಕಾರ ಬೋಧಿಸುತ್ತಿರುವ ಮಿತವ್ಯಯದ ಪಾಲಿಸಿಗೆ, ನೀತಿಗೆ ಅನುಗುಣವಾಗಿದೆಯೇ? ಇದಕ್ಕಿಂತ ಹೆಚ್ಚಾಗಿ ಒಂದು ತಪ್ಪನ್ನು ಸರ್ಕಾರವರು ಮಾಡಿದ್ದಾರೆ. ಅಥವಾ ಕಾನೂನು ಇಲಾಖೆಯವರು ಮಾಡಿದ್ದಾರೆ. ಅಥವಾ ಆರ್ಥಿಕ ಇಲಾಖೆಯವರು ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನನಗೆ ತಿಳಿದ ಹಾಗೆ ಪೂರಕ ಅಂದಾಜುಗಳಿಗೆ ಸೇರಿಸುವ ಯಾವುದೇ ಮೊತ್ತವನ್ನು ಖರ್ಚು ಮಾಡಿದ ನಂತರ ಇಡುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ಒಂದು ಬೇಡಿಕೆಯಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ. ಸಂವಿಧಾನ ಬದ್ಧವಾಗಿ ನಾವು ಆಲೋಚನೆ ಮಾಡುವುದಾದರೆ, ಇವತ್ತಿನ ದಿವಸ "ಎಕ್ಸಸ್ ಓವರ್ ದಿ ಗ್ರಾಂಟ್"ಆ ಒಂದು ಅಡಿಯಲ್ಲಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರ ಶಿಫಾರಸ್ಸಿನೊಂದಿಗೆ ಈ ಮನೆಯ ಮುಂದಿಡುವ ವಿಷಯ ಬರಬೇಕಾಗಿತ್ತು, ಆದರೆ ನಾವು ಯಾವುದನ್ನು ನೋಡುವ ಅಧಿಕಾರ ವರ್ಗ ಅಥವಾ ನಮ್ಮ ಆಡಳಿತದಲ್ಲಿ ಭ್ರಷ್ಟತೆ ಅಥವಾ ಅದಕ್ಷತೆ ಎಂದು ಹೇಳಬಹುದು. ಸುಮಾರು 50 ಲಕ್ಷ ರೂಪಾಯಿಗಳನ್ನು ಏಕೆ ಮಂಜೂರು ಮಾಡಬೇಕು ಎನ್ನುವುದಕ್ಕೆ ಅವರು ವಿವರಣಾತ್ಮಕ ಟಿಪ್ಪಣಿಯಲ್ಲಿ ಹೇಳುತ್ತಾರೆ.

"ಮಂತ್ರಿಮಂಡಲಕ್ಕೆ ಟೆಲಿಫೋನ್ ಪೀಠೋಪಕರಣ, ಮುಂತಾದವುಗಳನ್ನು ಒದಗಿಸಿದ್ದರಿಂದ ಹಾಗೂ ರಕ್ಷಣೆಯ ಉದ್ದೇಶದಿಂದ, ವಿಧಾನಸೌಧದ ಪೂರ್ವ ಹಾಗೂ ಪಶ್ಚಿಮ ದ್ವಾರಗಳಲ್ಲಿ ಸ್ಕ್ಯಾನರ್‌ಗಳನ್ನು ಸ್ಥಾಪಿಸುದುದರಿಂದ ಅಧಿಕ ವೆಚ್ಚವಾಗಿದೆ ಎಂದು ಹೇಳಿದ್ದಾರೆ. ಒಂದು ಸಾರಿ ಅಧಿಕ ವೆಚ್ಚವಾಗಿದೆ ಎಂದು ಹೇಳಿದರೆ, it does not come under the Supplementary estimates. It shall come as excess over the grants. ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ತಪ್ಪನ್ನು ಸರಿಪಡಿಸಬೇಕು. ಅಥವಾ ತಪ್ಪಾಗಿ ಏನಾದರೂ ಹೇಳಿದ್ದರೆ, ಅದಕ್ಕೆ ಸರ್ಕಾರದವರು ವಿವರಣೆ ಕೊಡಬೇಕು. ಈ ರೀತಿಯಾಗಿ ಒಂದು ಫೈನಾನ್ಷಿಯಲ್ವೇನಲ್ಲಿ ಯಾವ ಒಂದು ವರ್ಷದಲ್ಲಿ ನೀವು ಹಣವನ್ನು ಈಗಾಗಲೇ ಬೇಡಿಕೆಗಿಂತಲೂ ಹೆಚ್ಚು ಖರ್ಚು ಮಾಡಿದ್ದರೆ ಈ ಒಂದು ಪೂರಕ ಅಂದಾಜುಗಳನ್ನು ತರಲಿಕ್ಕೆ ನಿಯಮಗಳ ಪ್ರಕಾರ ಸಾಧ್ಯವಿಲ್ಲ. ಸಂವಿಧಾನದ ಪ್ರಕಾರ ತರಲಿಕ್ಕೆ ಸಾಧ್ಯವಿಲ್ಲ. ಆ ಒಂದು ವೆಚ್ಚವನ್ನು ಬೇಡಿಕೆಗಿಂತ ಹೆಚ್ಚು ಆಡಳಿತ ವೆಚ್ಚ ಎಂದು ಪರಿಗಣಿಸಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸ್ಸಿನೊಂದಿಗೆ ಈ ಸಭೆಯ ಅನುಮೋದನೆಗೆ ತರಬೇಕಾಗಿದೆ. ಈ ಕೆಲಸ ಆಗಿಲ್ಲದಿರುವುದು ಒಂದು ಲೋಪ ಎಂದು ತಮ್ಮ

ಮುಂದೆ ಹೇಳುತ್ತೇನೆ. ಆಗಲೇ ಮಾನ್ಯ ಮಂತ್ರಿಯವರು ಒಬ್ಬರು ಹೇಳುತ್ತಿದ್ದರು. ಬೇಡಿಕೆ 58ರ ಬಗ್ಗೆ ಸುಮಾರು 587.50 ಕೋಟಿ ರೂಪಾಯಿಗಳನ್ನು ಇವತ್ತಿನದಿವಸ ನಮ್ಮ ಮುಂದೇ ತಂದಿದ್ದಾರೆ.

ಇದು ಗ್ರಾಮೀಣ ಬಡ ಜನತೆಗೆ ಉದ್ಯೋಗ ಭರವಸೆ ಯೋಜನೆ. 1993-94ರಲ್ಲಿ ಕೇಂದ್ರ ಸರ್ಕಾರದಿಂದ ಏನು 470 ಲಕ್ಷ ರೂಪಾಯಿಗಳನ್ನು ಪಡೆದುಕೊಂಡಿದ್ದಾರೆ. ಆ ಬಾಬ್ತು ಸುಮಾರು 117 ಲಕ್ಷ ರೂಪಾಯಿಗಳನ್ನು ರಾಜ್ಯ ಸರ್ಕಾರ ಕೊಡಬೇಕಾಗಿದೆ. ಒಪ್ಪಿಗೆಗಾಗಿ ಇವತ್ತಿನದಿವಸ ಮುಂದಿಟ್ಟಿದ್ದಾರೆ. ಯಾವ ಒಂದು ಉದ್ದೇಶಕ್ಕೆ ಈ ಯೋಜನೆ ಆಯಿತು? ಆ ಉದ್ದೇಶದ ಈಡೇರಿಕೆಗೋಸ್ಕರ ಇಲ್ಲಿಯವರೆಗೆ ಈ ಕಾರ್ಯಕ್ರಮದ ಅಡಿಯಲ್ಲಿ ಏನು ಹಣವನ್ನು ತಾವು ಖರ್ಚು ಮಾಡಿದ್ದೀರಿ? ಎನ್ನುವ ಮಾತನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರದವರು ಶೇಕಡ 80ರಷ್ಟು ಸಹಾಯವನ್ನು ಇವತ್ತಿನದಿವಸ ಕೊಡುತ್ತಿದ್ದಾರೆ. ಶೇಕಡ 20ರಷ್ಟು ಹಣವನ್ನು ಇವತ್ತು ನಾವು ಬಳಸಬೇಕಾಗಿದೆ. ಆ ರೀತಿಯಾಗಿ ಸುಮಾರು 5 ಕೋಟಿ 87 ಲಕ್ಷ ರೂಪಾಯಿಗಳ ಏನು ಯೋಜನೆ ಇದೆ, ಏನು 100 ದಿನಗಳಿಗೆ ಬಡಜನರಿಗೆ 100 ದಿನಗಳ ಸಾಂದರ್ಭಿಕ ದೈಹಿಕ ಶ್ರಮ ಆಧಾರಿತ ಉದ್ಯೋಗವನ್ನು ಒದಗಿಸುವುದೇ ಗುರಿಯಾಗಿತ್ತು, ಆದರೆ ಆ ರೀತಿಯಾಗಿ ಯಾವ ಒಂದು ಕೆಲಸ ಆಗಿದೆ? ಎಷ್ಟು ಜನ ಈ ಒಂದು ಕಾರ್ಮಿಕರಿಗೆ ಅಥವಾ ಉದ್ಯೋಗವನ್ನು ಬಯಸುವಂಥ ಜನರಿಗೆ ಉದ್ಯೋಗವನ್ನು ಕೊಟ್ಟಿದ್ದಾರೆ? ಎಷ್ಟು ಹಣ ಖರ್ಚು ಆಗಿದೆ ಎನ್ನುವ ಮಾತನ್ನು ಹೇಳಬೇಕಾಗಿದೆ. ಅದೇ ರೀತಿ ಕೊನೆಯ ಒಂದು ಬೇಡಿಕೆ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇದು ಅತ್ಯಂತ ಮುಖ್ಯವಾದ ಬೇಡಿಕೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಇತರೇ ಹಿಂದುಳಿದ ವರ್ಗದವರ ಕಲ್ಯಾಣಕ್ಕೋಸ್ಕರ ಬೇಡಿಕೆ 60ರಲ್ಲಿ ಸುಮಾರು 40 ಕೋಟಿಗಿಂತಲೂ ಹೆಚ್ಚುಹಣವನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮ ಮಾನ್ಯ ಸ್ನೇಹಿತರು ಹೇಳುತ್ತಿದ್ದರು. ನಾವು ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದೇವೆ ಎಂದು. ಈ ಹಣ ಹೇಗೆ ಖರ್ಚಾಗುತ್ತಿದೆ ಎಂದರೆ, ಬೇರೆ ಬೇರೆ ಇಲಾಖೆಗಳಿಗೆ ಗೊತ್ತುಪಡಿಸಿರುವ ಹಣವನ್ನು ರೀಅಪ್ರೋಪ್ರಿಯೇಟ್ ಮಾಡುವುದರ ಮುಖಾಂತರ ಮತ್ತೊಂದು ಇಲಾಖೆಗೆ ಆ ಹಣವನ್ನು ಕೊಟ್ಟು ಆ ಇಲಾಖೆಯಿಂದ ಮಾಡಿಸುವಂತಹ ಒಂದು ಕೆಲಸ ನಡೆದಿದೆ. ಇದರ ಅವಶ್ಯಕತೆ ಏನು ಇತ್ತು? ನೋಡಿದವರಿಗೆ ನಾವು ಹೊಸದಾಗಿ ಹಣವನ್ನು ಕೊಟ್ಟಿದ್ದೇವೆ ಎನ್ನುವ ಮಾತು ಅಲ್ಲ. ಇವತ್ತಿನದಿವಸ ಅನೇಕ ಬೇಡಿಕೆಗಳ ಅಡಿಯಲ್ಲಿ ಏನು ಹಣವನ್ನು ಅವರು ತೆಗೆದುಕೊಂಡಿದ್ದಾರೆ ಅವೆಲ್ಲವನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಸುಮಾರು 10 ಇಲಾಖೆಗಳಿಂದ ಸುಮಾರು 47 ಕೋಟಿ ರೂಪಾಯಿಗಳನ್ನು ಇವತ್ತಿನದಿವಸ ತೆಗೆದುಕೊಂಡು ಅದನ್ನು ಮರು ಹಂಚಿಕೆ ಮಾಡಿದ್ದಾರೆ. ಆ 47 ಕೋಟಿ ರೂಪಾಯಿಗಳನ್ನು ಬೇರೆ, ಬೇರೆ, ಅಂದರೆ ಬೇಡಿಕೆ ಸಂಖ್ಯೆ 3, 47 ಮತ್ತು 60ರಲ್ಲಿ ಈ ಹೊಸ ಬೇಡಿಕೆಗಳನ್ನು ಸೇರಿಸಿ ಈ ಹಣವನ್ನು ಕೊಟ್ಟಿದ್ದಾರೆಯೇ ಹೊರತಾಗಿ ಹೊಸದಾಗಿ ಏನೂ ಕೊಟ್ಟಿಲ್ಲ. ಆದ್ದರಿಂದ, ಇದರ ಒಂದು ಕೇವಲ ಪ್ರಚಾರಕ್ಕೋಸ್ಕರ ಮಾಡಿದ ಒಂದು ಕಾರ್ಯಕ್ರಮ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ ಹಣವನ್ನು ಈಗಾಗಲೇ ಈ ವಿಧಾನಸಭೆ, ಈ ಸದನ ಈಗಾಗಲೇ ಮಂಜೂರಾತಿ ಮಾಡಿತ್ತು ಬೇರೆ ಬೇರೆ ಬೇಡಿಕೆಗಳ ಅಡಿಯಲ್ಲಿ ಏನು ಹಣವನ್ನು ಮಂಜೂರಾತಿ ಮಾಡಿತ್ತು ಆ ಹಣವನ್ನು ಬೇರೆ ಬೇಡಿಕೆಗಳಿಗೆ ವಿನಿಯೋಗಸಲಿಕ್ಕೆ ಬೇಕಾದಂತಹ ಅಧಿಕಾರವನ್ನು ಕೊಡುವುದಕ್ಕೆ ಮಾತ್ರ ಇಟ್ಟಿದ್ದಾರೆಯೇ ಹೊರತಾಗಿ ಇದು ಯಾವುದೇ ಒಂದು ಹೊಸ ಕಾರ್ಯಕ್ರಮ ಅಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತು ಬೇರೆ ಇಲಾಖೆಯವರಿಂದ ಈ ಒಂದು

ಕಾರ್ಯಕ್ರಮಕ್ಕೆ ಹಣವನ್ನು ಗೊತ್ತುಪಡಿಸುವುದರಿಂದ ಹೆಚ್ಚಿನ ಒಂದು ಹಣವನ್ನು ಈ ವರ್ಗದ ಜನರ ಕಲ್ಯಾಣಕ್ಕೋಸ್ಕರ ಮಾಡಿಲ್ಲ. ಕೇವಲ ಇರುರಂತಹ ಹಣವನ್ನೇ ಪುನರ್ ವಿನಿಯೋಗ ಮಾಡುವುದರ ಮುಖಾಂತರ ಹೆಚ್ಚು ಹಣವನ್ನು ತೋರಿಸುವ ರೀತಿಯಲ್ಲಿ ಈ ಪೂರಕ ಅಂದಾಜನ್ನು ಇಟ್ಟಿದ್ದಾರೆ ಎಂದು ಹೇಳುತ್ತಾ, ಇವತ್ತಿನದಿವಸ ಈ ಪೂರಕ ಅಂದಾಜುಗಳು 1 ಮತ್ತು 2 ಏನಿವೆ, ಈ ಎರಡೂ ಪೂರಕ ಅಂದಾಜುಗಳಲ್ಲಿ ನಾನು ಹೇಳಿದಂತಹ ಹಲವಾರು ಆಕ್ಷೇಪಣೆಗಳಿಗೆ ಒಳಪಟ್ಟು ಇನ್ನು ಉಳಿದಂತಹವು, ಏನು ಇವೆ ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಲ್ಯಾಂಡ್ ಅಕ್ವಿಸಿಷನ್ ಕೇಸಸ್ನಲ್ಲಿ ನಾವು ಹಣವನ್ನು ಕೊಡಬೇಕಾಗಿದೆ. ನೀವು ಕೊಡಬಾರದು ಎಂದು ಹೇಳುವುದಿಲ್ಲ. ಅದೇ ರೀತಿ, ಮತ್ತೊಂದು ಈ ಎರಡು ಪೂರಕ ಅಂದಾಜುಗಳ ಒಟ್ಟು ಮುಖ್ಯವಾದ ಸಾರಾಂಶ ಏನೆಂದರೆ, ಹೊಸದಾಗಿ ಹಣವನ್ನು ಕೊಡುವುದಕ್ಕೆ ಹೋಗಿಲ್ಲ. ಪ್ರತಿಯೊಂದು ಇಲಾಖೆಯಲ್ಲೂ ಸಹಾ ಹೆಚ್ಚು ಕಡಿಮೆ, ಬಹುತೇಕ ಇಲಾಖೆಗಳಲ್ಲಿ ಬಹುತೇಕ ಬೇಡಿಕೆಗಳ ಬಾಬ್ತು ಅವರು ಹೇಳುವುಂತಹ ಒಂದೇ ಒಂದು ಮಾತು ಎಂದರೆ, ನಾವು ಇದನ್ನು ಉಳಿತಾಯ ಮಾಡುತ್ತೇವೆ, ಮತ್ತು ಉಳಿತಾಯ ಮಾಡುವುದರ ಮುಖಾಂತರ ಈ ಹಣವನ್ನು ಈ ಒಂದು ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ.

ಅಧ್ಯಕ್ಷರೇ, ಇದರಿಂದ ಇರುವಂತಹ ಹಣವನ್ನು ಉಳಿತಾಯಮಾಡಬೇಕಾದರೆ ಅಲ್ಲಿ ಹಣದ ಅವಶ್ಯಕತೆ ಇಲ್ಲವೇ? ಅಲ್ಲಿ ಹಣದ ಅವಶ್ಯಯಕತೆ ಇಲ್ಲದೇ ಇದ್ದರೆ ಈ ಸದನದಲ್ಲಿ ಆ ಬೇಡಿಕೆಗೆ ಮುಂಜೂರಾತಿಯನ್ನು ಪಡೆಯುವ ಅವಶ್ಯಕತೆ ಏನಿತ್ತು? ಇವತ್ತಿನದಿವಸ ಸದನದಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮಗಳಿಗೆ ಬೇರೆ ಬೇರೆ ಬೇಡಿಕೆಗಳ ಹೆಸರಿನಲ್ಲಿ ಹಣವನ್ನು ಪಡೆಯುವುದು, ಪುನಃ ಮರುಹಂಚಿಕೆ ಮಾಡುವುದು ಅಥವಾ ವಿನಿಯೋಗ ಮಾಡುವುದರ ಮುಖಾಂತರ ಹೊಸ ಕಾರ್ಯಕ್ರಮ ತೆಗೆದುಕೊಳ್ಳುವಂತಹ ಪ್ರವೃತ್ತಿ ಏನಿದೆ ಇದು ಸರಿಯಲ್ಲ ಎಂದು ಹೇಳುತ್ತಾ ನನ್ನ ಮಾತನ್ನು ಪೂರೈಸುತ್ತೇನೆ. ವಂದನೆಗಳು.

+ ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ನಾನು ಪೂರಕ ಅಂದಾಜುಗಳ ಪರಿಪೂರ್ಣ ವಿವರಗಳಿಗೆ ಹೋಗುವುದಿಲ್ಲ. ಒಂದೇ ಒಂದು 'ಸ್ಥಳೀಯ ಸಂಸ್ಥೆಗಳು ಮತ್ತು ಕಾರ್ಪೊರೇಷನ್‌ಗಳಿಗೆ ಸಹಾಯ' ಎನ್ನುವಂಥ ಒಂದು ವೆಚ್ಚದಲ್ಲಿ ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟೆಡ್ಗೆ ಪುಟ 2, ಬಾಬ್ತು ಸಂಖ್ಯೆ 3ರಲ್ಲಿ ".... ಕಡಲೆಕಾಯಿ ಬೀಜ ಮತ್ತು ಹತ್ತಿಬೀಜದಿಂದ ಪ್ರೊಟೀನ್ಯುಕ್ತ ಖಾದ್ಯತೈಲವನ್ನು ತೆಗೆಯಲು ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟಡ್ 1973ರಲ್ಲಿ ಸ್ಥಾಪಿಸಲಾಯಿತು. ಕಂಪನಿಯು ಸ್ಥಾಪನೆಯಾದಾಗಿನಿಂದಲೂ ಲಾಭದಾಯಕವಾಗಿ ನಡೆದಿಲ್ಲವಾದ್ದರಿಂದ ಅದು ಹೆಚ್ಚು ನಷ್ಟವನ್ನು ಅನುಭವಿಸಿದ್ದರಿಂದ ಕಂಪನಿಯ ನೌಕರರ ವೇತನ ಬಾಕಿಯನ್ನು ಹಾಗೂ ಕಂಪನಿಯ ದಾಯತ್ವವನ್ನು ತೀರಿಸಲು ಇಚ್ಛಾಪೂರ್ವಕವಾಗಿ ಕಂಪನಿಯನ್ನು ಪರಿಸಮಾಪ್ತಿಗೊಳಿಸಲು ನಿರ್ಧರಿಸಲಾಗಿದೆ. ಎನ್ನುವಂಥ ಮಾತನ್ನು ಹೇಳಿದ್ದಾರೆ. ಮೂಲತಃ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಒಂದು ದೊಡ್ಡ ಸಂಸ್ಥೆಯಾಗಿದೆ. ಅದನ್ನು ಅನೇಕ ವಿಭಾಗಗಳನ್ನಾಗಿ ಮಾಡಿದರು. ಬ್ಯಾಸ್ಕೊ, ಆಗ್ರೋ ಪ್ರೊಟೀನ್ಸ್ ಕಾರ್ಪೊರೇಷನ್, ಆಗ್ರೊ ಸೀಡ್ ಕಾರ್ನ್ ಪ್ರಾಡಕ್ಟ್ ಲಿಮಿಟಡ್, ಹೀಗೆ ಈ ಕಂಪನಿಗಳೆಲ್ಲ ಏಕೆ ಲುಕ್ಸಾನು ಅನುಭವಿಸುತ್ತಾ ಇದ್ದಾವೆ? ಏಕೆ ಮುಚ್ಚತಕ್ಕಂಥ ಪರಿಸ್ಥಿತಿ ಬಂದಿದೆ? ಇನ್ನು ಎಷ್ಟು ಕಂಪನಿಗಳನ್ನು ನೀವು ಮುಚ್ಚಬೇಕಾಗುತ್ತದೆ. ಒಂದೇ ಒಂದು ವಿಚಾರವನ್ನಷ್ಟೇ ನಾನು ಪ್ರಸ್ತಾಪ ಮಾಡುತ್ತೇನೆ. ಕರ್ನಾಟಕ ಸ್ಟೇಟ್‌ಆಗ್ರೋ ಕಾರ್ಪೊರೇಷನ್ ಲಿಮಿಟೆಡ್ ಅನ್ನತಕ್ಕಂಥದ್ದು ಹೆಬ್ಬಾಳದಲ್ಲಿ ಒಂದು ಸಂಸ್ಥೆಯಿದೆ. ಈ ಸಂಸ್ಥೆಗೆ ಮಾನ್ಯ ಶಾಸಕರೊಬ್ಬರು ಅಧ್ಯಕ್ಷರು. ಏಳು ಜನ ಅಫಿಶಿಯ್ ಡೈರೆಕ್ಟರ್ಸ್. ನಾಲ್ಕು ಜನ ಐ.ಎ.ಎಸ್. ಇದ್ದಾರೆ, ಉಳಿದವರು ಮೂರು ಜನ ಇದ್ದಾರೆ. ಛೇರ್ಮನ್ ಎಂ.ಡಿ. ಹೊಸದಾಗಿ ಬಂದಿದ್ದಾರೆ.

ಆಗ್ರೊ ಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್ ಈ ಯೋಜನೆಯ ಅಡಿಯಲ್ಲಿ ಪೌಲ್ಟ್ರಿ ಮತ್ತು ಕ್ಯಾಟಲ್ ಫೀಡ್ಸ್ ಮಾಡತಕ್ಕಂಥಾದ್ದು, ಅಕ್ಷಯ ಆಹಾರ ಅಂತ ಒಂದು ಕಾರ್ಯಕ್ರಮ ಇದೆ.

ಇದಕ್ಕೆ ರಾಜ್ಯಸರ್ಕಾರ 35 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಈ ಜೋಳ, ಗೋಧಿ, ಬಿಳಿಜೋಳ, ಮೆಕ್ಕೆಕೋಳ, ಅಕ್ಕಿ, ರಾಗಿ, ಸೀರಿಯಲ್ಸ್ ಇವನ್ನೆಲ್ಲ ಸೇರಿಸಿ ಮಕ್ಕಳಿಗೆ ಒಂದು ಮಿಕ್ಸಡ್ ಫುಡ್ ತಯಾರು ಮಾಡಿ ಈ ಕಾರ್ಪೊರೇಷನ್ ಮೂಲಕ ವಿತರಣೆಯಾಗುತ್ತದೆ. ಇದಕ್ಕಾಗಿ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು 7500 ಮೆಟ್ರಿಕ್ ಟನ್ನಷ್ಟು ಗೋಧಿಯನ್ನು ಈ ಕಾರ್ಪೊರೇಷನ್‌ಗೋಸ್ಕರ ಕೊಟ್ಟಿದ್ದಾರೆ. ಆದರೆ ಈ ಕಾರ್ಪೊರೇಷನ್ನವರು ಒಂದೇ ಒಂದು ಮೆಟ್ರಿಕ್ ಟನ್ನಷ್ಟು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ಲಿಫ್ಟ್ ಮಾಡಿಲ್ಲ. ಕಾರಣ ಏನು? ಅದಕ್ಕೆ 4500 ರೂಪಾಯಿ ಪರ್ ಟನ್ ಒಂದು ಅಂದಾಜು ಎರಡು ಸಾವಿರ ರೂಪಾಯಿ ಸಬ್ಸಿಡಿ ಇದೆ. ಎರಡೂವರೆ ಸಾವಿರ ರೂಪಾಯಿಗೆ ಒಂದು ಮೆಟ್ರಿಕ್ ಟನ್ನಂತೆ 7500 ಟನ್ ಕೇಂದ್ರ ಸರ್ಕಾರದ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಈ ಕಾರ್ನ್ ಕಾರ್ಪೊರೇಷನ್‌ಗೆ ಕೊಟ್ಟಿದೆ. ಅದನ್ನು ಬಿಟ್ಟು ಈಗ ಮಾರ್ಕೆಟ್ ರೇಟ್‌ನಲ್ಲಿ ಕಮಿಷನ್ ಏಜೆನ್ಸಿಯನ್ನು ನಿಗದಿಮಾಡಿ ಹೊಸ ಹೊಸದಾಗಿ ಈ ಅಧ್ಯಕ್ಷರ ಸಂಬಂಧಿಕರಿಗೆ ಲೈಸೆನ್ಸ್ ಕೊಟ್ಟು, ಆ ಲೈಸೆನ್ಸ್ ಮೂಲಕ ರಾಜ್ಯದ ರೈತರನ್ನು ದೋಚುತ್ತಿದ್ದಾರೆ.

ಏಕೆ ಕಂಪನಿಯನ್ನು ಮುಚ್ಚುತ್ತಿದಾರೆ? ಈಗಲೇ ತಾವು ಇದನ್ನು ಗಮನಿಸದೇ ಇದ್ದರೆ, ಮತ್ತೆ ಪೂರಕ ಅಂದಾಜಿನಲ್ಲೋ, ಬಜೆಟ್‌ನಲ್ಲೋ ಈ ಕಂಪನಿಯನ್ನು ಮುಚ್ಚುವುದಕ್ಕೆ ದುಡ್ಡು ಕೊಡಿ ಅಂತ ನಮ್ಮ ಹತ್ತಿರ ಬರುತ್ತೀರಿ. ಅಧ್ಯಕ್ಷರೇ, ನಾನು ಹೇಳುತ್ತಿದ್ದೇನೆ, ಮಾರ್ಕೆಟ್ನಲ್ಲಿ 285 ರೂಪಾಯಿ ಪರ್ ಕ್ವಿಂಟಾಲ್ ಇದ್ದರೆ, ಇವರು 340 ರೂಪಾಯಿಗೆ ಕಮಿಷನ್ ಏಜೆನ್ಸಿಯಿಂದ ಖರೀದಿ ಮಾಡುತ್ತಿದ್ದಾರೆ. ಈ ಕಮಿಷನ್ ಏಜೆನ್ಸಿಗಳು ಯಾವುವು? ನಾನು ಒರಿಜಿನಲ್ ಪೇಪರ್ಸ್ ಇಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. ಇನ್ನೊಂದು ಕಾರ್ಪೊರೇಷನ್ ಅನ್ನು ಮುಚ್ಚಬೇಡಿ. ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. Yellow hybrid maize Ë Annadanaiah Traders, foodgrain merchants, Basavana Bhavi cross, Chandrakant Talkies Road, Raichur ಇದು ಒಂದು ಏಜೆನ್ಸಿ.

340 ರೂಪಾಯಿ ಪರ್ ಕ್ವಿಂಟಾಲ್ ರೇಟ್ ಕೊಡುತ್ತಾರೆ ಈ ಕಾರ್ನ್ ಕಾರ್ಪೊರೇಷನ್ನವರು. ರೈತರಿಂದ 280-285 ರೂಪಾಯಿಗೆ ಇದನ್ನು ಪರ್ಚೇಸ್ ಮಾಡುತ್ತಾರೆ. ಹಿಂದೆ ಈ ಕಾರ್ಪೊರೇಷನ್ ರೈತರಿಂದ ನೇರವಾಗಿ ಕೊಳ್ಳುತ್ತಿತ್ತು. ಈಗ ಏಕೆ ಏಜೆನ್ಸಿ ಫಿಕ್ಸ್ ಆಯಿತು? ರೈತರಿಗೆ ಮತ್ತು ಕಾರ್ಪೊರೇಷನ್ ಕೊಡತಕ್ಕಂಥ ದುಡ್ಡಿಗೆ ಇರತಕ್ಕಂಥ 55ರಿಂದ 60 ರೂಪಾಯಿ ವ್ಯತ್ಯಾಸವನ್ನು ಈ ಮಧ್ಯವರ್ತಿಗಳಿಗೆ ಕಾರ್ಪೊರೇಷನ್ನವರು ಕೊಡತಕ್ಕಂಥ ಅಧಿಕಾರವನ್ನು ಯಾರು ಕೊಟ್ಟರು? ಇದರ ವಿವರಣೆ ನನಗೆ ಬೇಕು. Mallikarjuna Trading Co., General Merchants and Commission agents, Santhepet, Periyapatna. ಇದು ಮತ್ತೊಂದು. I don't want to pass on the original papers. ಇಂತಹ ನಾಲ್ಕೈದು ರಸೀದಿಗಳನ್ನು ತಮಗೆ ಕಳಿಸುತ್ತೇನೆ. ರೈತರ ಹೆಸರಿನಲ್ಲಿ ಆಗತಕ್ಕಂಥ ಅನ್ಯಾಯಗಳು ನಿಮಗೆ ಗೊತ್ತಾಗಲಿ ಎಂದು ಕಳಿಸುತ್ತೇನೆ. ನೀವು ಈ ತಕ್ಷಣ ಗಮನಿಸಬೇಕು ಈ ಆಗ್ರೋ ಕಾರ್ನ್ ಕಾರ್ಪೊರೇಷನ್ನ ಡೈರೆಕ್ಟರ್ಸ್ ಯಾರು ಇದ್ದಾರೆ, ಎಷ್ಟು ಸಲ ಸಭೆ ಸೇರಿದ್ದಾರೆ, ಟೆಂಡರ್ಸ್ ಹ್ಯಾಗೆ ಕರೆದರು ಈ 340 ರೂಪಾಯಿ ರೇಟ್ ಹೇಗೆ ನಿಗದಿಯಾಯಿತು? ರೈತರಿಗೆ ಕೊಡತಕ್ಕಂಥ ಈ 60 ರೂಪಾಯಿ ವ್ಯತ್ಯಾಸ, ಈ ಹಣ ಎಲ್ಲಿಗೆ ಹೋಗುತ್ತಿದೆ? ನೇರವಾಗಿ ಕಾರ್ಪೊರೇಷನ್ ರೈತರಿಂದ ಆ ಹಣ ಕೊಟ್ಟು ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲವೆ? ಹಾಗಿದ್ದರೆ ಈ ಕಾರ್ಪೊರೇಷನ್ ಅನ್ನು ಮುಂದಿನಸಾರಿ ಲಿಕ್ವಿಡೇಶನ್ ಪ್ರೊಸಸ್

ಅಂತ ಮತ್ತೊಂದು 80 ಲಕ್ಷಕ್ಕೋ, ಒಂದು ಕೋಟಿಗೋ ಸರ್ಕಾರಕ್ಕೇ ಕೇಳಿ Agro Industries Corporation was a white elephant at that time.

ಅದನ್ನು ರಿವೈಸ್ ಮಾಡಿ ಮತ್ತೆ ಸಣ್ಣಸಣ್ಣ ಆನೆಗಳನ್ನು ಸೃಷ್ಟಿಮಾಡಿ, I don't want to name the person. Of course, he is an IAS officer. Dr. Puranikmath, he says I have come here to close the company. He has the audacity to say that. The Agriculture Minister doesn't take notice of it.

ಅಲ್ಲಿ ಲೂಟಿ ಹೊಡೆಯುತ್ತಿದ್ದಾರೆ. ಆದ್ದರಿಂದ ಈ ರಸೀತಿಗಳನ್ನು ನಾನು ಅವರಿಗೆ ಕಳಿಸುತ್ತಾ ಇದ್ದೇನೆ. ಇದನ್ನು ತನಿಖೆ ಮಾಡಿ. ತನಿಖೆಮಾಡಿ ರೈತರಿಗೆ ಆಗತಕ್ಕಂಥ ಅನ್ಯಾಯವನ್ನು ತಪ್ಪಿಸಿ, ಕಾರ್ಪೊರೇಷನ್ನಲ್ಲಿ ನಡೆಯುತ್ತಿರತಕ್ಕಂಥ ದುರಾಡಳಿತವನ್ನು ನಿಲ್ಲಿಸಿ.

(ಮಾನ್ಯ ಸದಸ್ಯರು ಮುಖ್ಯಮಂತ್ರಿಗಳಿಗೆ ರಸೀತಿಗಳ ಜೆರಾಕ್ಸ್ ಪ್ರತಿಗಳನ್ನು ಕಳಿಸಿಕೊಟ್ಟರು)

ನಿನ್ನೆ ಒಂದು ವಿಶೇಷವಾದಂಥ ಒಂದು ವರದಿಯನ್ನು ಕನ್ನಡಪ್ರಭ ಪತ್ರಿಕೆ ಪ್ರಸಿದ್ಧಿ ಮಾಡಿದೆ. ಇದು ಕರ್ನಾಟಕ ಸಣ್ಣ ಕೈಗಾರಿಕೆ ಮಾರುಕಟ್ಟೆ ನಿಗಮ. ಕೆ.ಎಸ್.ಐ.ಎಂ.ಸಿ. ಇದರಲ್ಲಿ ಆಗುತ್ತಾ ಇರತಕ್ಕಂಥ ಒಂದು ದುರಂತ ಕಥೆ. ಹೀಗೆ ನೀವು ಒಬ್ಬೊಬ್ಬ ಅಧ್ಯಕ್ಷರನ್ನು ಮಾಡಿ, ಸರ್ಕಾರವನ್ನು ಲೂಟಿ ಹೊಡೆಯುವುದಕ್ಕೆ ಇದೊಂದು ಮಾರ್ಗ ಎಂದು ಮಾಡುವುದಾದರೆ ನಾನು ಇದರ ವಿವರಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಪತ್ರಿಕೆಯನ್ನು ಓದಿರುತ್ತಾರೆ. ಪೂರಕ ಬಜೆಟ್ನಲ್ಲಿ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳಬಾರದು. ಇದೂ ಕೂಡ ಕೆ.ಎಸ್.ಐ.ಎಂ.ಸಿ ವ್ಯವಹಾರದ ವೈಖರಿ. ಇದರ ಪೂರ್ತಿ ವಿವರ ಬೇಕಾದರೆ, I need atleast one hour to explain the whole thing. Therefore, I don't want to take the time of the House. I want both these companies viz., Agro Corn and KSIMC ಈ ವ್ಯವಹಾರಗಳನ್ನು ಈಗಲೇ ನೀವು ತುದಿಯಲ್ಲೇ ಮುರಿಯದೇ ಇದ್ದರೆ, ದುರ್ದೈವ ಏನೆಂದರೆ, ರಾಜಕಾರಣಿಗಳ ಕೈಗೆ ಕೊಟ್ಟು ವ್ಯವಹಾರ ನಡೆಸುತ್ತಿದ್ದಾರೆ ಎನ್ನುವ ಮಟ್ಟಿಗೆ ಜನರು ಮಾತನಾಡುವ ಸ್ಥಿತಿಗೆ ತಲುಪಿಸಿ ಒಟ್ಟು ನಮ್ಮ ವ್ಯವಸ್ಥೆಯನ್ನು ಕುಲಗೆಡಿಸಬೇಡಿ. ನಮಗೆಲ್ಲ ಅಪಮಾನ ಮಾಡಬೇಡಿ ಇಲ್ಲವೇ ದಯವಿಟ್ಟು ಶಾಸಕರನ್ನು ಅಂಥ ಕಂಪನಿಗಳಿಗೆ ಅಧ್ಯಕ್ಷರನ್ನಾಗಿ ಮಾಡಿ ಶಾಸನ ಸಭೆಗೆ ಅವಮಾನ ಮಾಡಬೇಡಿ. ಈ ಮಾತುಗಳನ್ನು ನಾನು ಗಂಭೀರವಾಗಿ ತಮಗೆ ಹೇಳಿ ಈ ಎರಡೂ ಕಂಪನಿ ಬಗ್ಗೆ ಮುಖ್ಯಮಂತ್ರಿಗಳು ವಿಚಾರಣೆ ಮಾಡತಕ್ಕಂಥ ಆದೇಶವನ್ನು ಕೊಡುತ್ತಾರೆ ಎನ್ನುವಂಥ ವಿಶ್ವಾಸದೊಂದಿಗೆ ಈ ಪೂರಕ ಅಂದಾಜುಗಳಿದ್ದಾವಲ್ಲ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಚಂದ್ರೇಗೌಡರೇ, ಒಂದು ನಿಮಿಷ. ಈ ಸಾರ್ವಜನಿಕ ಉದ್ದಿಮೆಗಳು ಏಕೆ ಖಾಯಿಲೆ ಬೀಳುತ್ತವೆ ಎನ್ನುವುದಕ್ಕೆ ಉದಾಹರಣೆ ಆಯಿತಲ್ಲ. ಏಕೆ ಖಾಯಿಲೆ ಬೀಳುತ್ತವೆ ಎನ್ನುವುದನ್ನು ನಾವು ಸ್ವಲ್ಪ ತಿಳಿದುಕೊಳ್ಳಬೇಕು. ಮುಖ್ಯಮಂತ್ರಿಗಳಿಗೆ ಇದು ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಈಗ ಪಶ್ಚಿಮ ಬಂಗಾಳದಲ್ಲಿ ಬಹಳಷ್ಟು ಕಾರ್ಖಾನೆಗಳು ಸಿಕ್ ಆಗುತ್ತಾ ಇವೆ. ಈಗ ಖಾಸಗೀಕರಣ ನೀತಿ ಏನು ಬಂದಿದೆ, ಖಾಸಗೀಕರಣ ಎರಡನೇಯ ಅಧ್ಯಾಯ. ಮೊದಲು ಆರೋಗ್ಯವಾಗಿರುವ ಕಾರ್ಖಾನೆಗಳಿಗೆ ಖಾಯಿಲೆ ಬರುವ ಹಾಗೆ ಮಾಡಬೇಕು. ಇದು ನಮ್ಮ ದೇಶದ ಒಳಗಡೆ ಇರುವ ಬಂಡವಾಳಶಾಹಿಗಳು ಮತ್ತು ನಮ್ಮ ಅಧಿಕಾರಿಗಳು ಸೇರಿ ಮಾಡುತ್ತಾ ಇರುವಂಥ ಕೆಲಸ. ರಾಜಕಾರಣಿಗಳು ಸೇರಿದ್ದಾರೆ. ಈಗ ದೇಶೀಯ ಬಂಡವಾಳಶಾಹಿಗಳು ಮತ್ತು ವಿದೇಶಿ ಬಂಡವಾಳಶಾಹಿಗಳು ಇದಕ್ಕೆ ಕೈಹಾಕುತ್ತಿದ್ದಾರೆ.

6.20 ಪಿ.ಎಂ

ವಿಶೇಷವಾಗಿ ಆಗ್ರೋ ಇಂಡಸ್ಟ್ರೀಸ್, ಆಗ್ರೋ ಪ್ರೋಸೆಸಿಂಗ್. ಇದರ ಬಗ್ಗೆ ತಮಗೆ ಗೊತ್ತಿದೆಯೋ, ಇಲ್ಲವೋ, ಗೊತ್ತಿರಬಹುದು. ಏಕೆಂದರೆ, ಖಾಸಗೀಕರಣ ತಮ್ಮ ನೀತಿಯಾಗಿರುವುದರಿಂದ, ಮೊದಲನೇ ಅಧ್ಯಾಯವೂ ಗೊತ್ತಿರಬಹುದು. ಎರಡನೇ ಅಧ್ಯಾಯವೂ ತಮಗೆ ಗೊತ್ತಿರಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುತ್ತಾ ಇದ್ದುದು, ಈ ಎರಡು ತಿಂಗಳಲ್ಲಿ 60 ಲಕ್ಷ ರೂಪಾಯಿಗಳ ಅಂದಾಜಿನ ಲುಕ್ಸಾನು ಈ ಆಗ್ರೋ ಕಾರನ್ ಕಾರ್ಪೊರೇಷನ್ನಲ್ಲಿ ಆಯಿತು. ಈ ಒಂದು ಡೀಲ್ನಲ್ಲಿ 3 ಲಕ್ಷ ರೂಪಾಯಿ, ನಾನು, ಇದರ ಬಗ್ಗೆ ನನ್ನ ಭಾಷೆ ಹೇಳುವುದು ಕಷ್ಟ. ಲೂಟಿ ಮಾಡಿದ್ದಾರೆ ಎನ್ನುವ ಮಾತನ್ನು ಅನಿವಾರ್ಯವಾಗಿ ಹೇಳಬೇಕಾದ ಪರಿಸ್ಥಿತಿ ಬಂದಿದೆ. ಇದು, ಇದುವರೆಗೆ ಲಾಭದಲ್ಲಿತ್ತು. 550 ಜನ ಅಲ್ಲಿ ಕೆಲಸ ಮಾಡುತ್ತಾರೆ. ಅವರೆಲ್ಲರೂ ಈಗ ಬೀದಿಗೆ ಬೀಳುತ್ತಾರೆ. ಮಾನ್ಯ ಹಿರಿಯ ಸದಸ್ಯರಾದ ನಂಜುಂಡಸ್ವಾಮಿಯವರು ಹೇಳಿದಹಾಗೆ, ಏನೋ ಒಂದು ಒಳಸಂಚು ನಡೆದಿದೆ. ಈ ಒಳಸಂಚು ಬಹುಶಃ ಪಬ್ಲಿಕ್ ಅಂಡರ್ ಟೇಕಿಂಗ್ಸ್ನಲ್ಲಿ ಅವರು ಹೇಳಿದಹಾಗೆ ಖಾಯಿಲೆ ಬೀಳಿಸಿ, ಅದನ್ನು ಸೊರಗಿಸಿ, ಮತ್ತೆ ಲಿಕ್ವಿಡೇಷನ್ ಮಾಡಿ, ಸರ್ಕಾರದಲ್ಲಿ ದುಡ್ಡು ಕೊಡೋದೋ ಇಲ್ಲ ಲಿಕ್ವಿಡೇಷನ್ಗೆ ಬರುವುದಕ್ಕೆ ಮುಂಚೆ, ಅದನ್ನೆಲ್ಲಾ ಖಾಸಗಿಯವರು ಕೊಂಡುಕೊಳ್ಳತಕ್ಕ ವ್ಯವಸ್ಥೆಯೋ ವ್ಯವಸ್ಥಿತವಾಗಿ ನಡೆಯುತ್ತಾ ಇದೆ. ನಾನು ಹೇಳಿರತಕ್ಕ ಇವರೆಡನ್ನು ಬಹಳ ಸೂಕ್ಷ್ಮವಾಗಿ, ತೀರ ತಳಮಟ್ಟ ಶೋಧಿಸಿ, ಅದಕ್ಕೆ ಪರಿಹಾರ ಕಂಡುಹಿಡಿಯದೇ ಇದ್ದರೆ, ಮತ್ತೆ 550 ಜನ ನೌಕರರು ಬೀದಿಗೆ ಬೀಳುತ್ತಾರೆ. ಆ ದೃಷ್ಟಿಯಿಂದಲೂ, ಈ ಪ್ರೊಡಕ್ಷನ್ ಕಾಸ್ಟ್ ಏನು? ಪ್ರೊಡಕ್ಷನ್ ಕಾಸ್ಟಿಗೆ ಬೇಕಾದಂಥ ಇನ್ಫ್ರಾಸ್ಟ್ರಕ್ಚರ್ ಎಲ್ಲಿಂದ ಬರುತ್ತದೆ, ಇದರಿಂದ ಮಧ್ಯವರ್ತಿಗಳಿಗೆ ಹೋಗುತ್ತಿರತಕ್ಕಂಥ ಲಾಭ ಏನು ಎಂಬುದರ ಬಗ್ಗೆ ದಯವಿಟ್ಟು ತನಿಖೆ ಮಾಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿ ನನ್ನ ಭಾಷಣ ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು, ಈ ದಿವಸ ಒಂದು ಮತ್ತು ಎರಡನೇ ಕಂತಿನ ಪೂರಕ ಬೇಡಿಕೆಗಳನ್ನು ಈ ಸಭೆಯ ಒಪ್ಪಿಗೆಗಾಗಿ ಇಟ್ಟಿದ್ದಾರೆ.

ಇದನ್ನು ವಿರೋಧಿಸಿ, ಒಂದೆರಡು ಮಾತನ್ನು ಹೇಳಬೇಕೆಂದು ಇಚ್ಚಿಸುತ್ತೇನೆ. ಪೂರಕ ಬೇಡಿಕೆಗಳು ಯಾವ ಸರ್ಕಾರ ಇದ್ದರೂ ಇದೇನೂ ಹೊಸದಾಗಿರತಕ್ಕಂಥಾದ್ದೇನಲ್ಲ. ಅಥವಾ ಪೂರಕ ಬೇಡಿಕೆಗಳು ಇಲ್ಲದೇ ಸರ್ಕಾರ ನಡೆಸುವುದಕ್ಕೆ ಸಾಧ್ಯವಿದೆ ಎಂದು ನಾನು ಹೇಳುವುದಿಲ್ಲ. ಚಲನಶೀಲವಾದಂಥ ಸರ್ಕಾರ ಯಾವುದೇ ಇದ್ದರೂ ಸಹ ತನ್ನ ದಿನನಿತ್ಯದ ಅಭಿವೃದ್ಧಿ ಕೆಲಸಗಳನ್ನು ನಡೆಸುತ್ತಿರತಕ್ಕ ಸಂದರ್ಭದಲ್ಲಿ ಇದು ಹೆಚ್ಚುಕಡಿಮೆ ಆಗುತ್ತದೆ. ಇದು ಸಹಜ. ಅದೇ ರೀತಿಯಲ್ಲಿ, ನಾನು ಈ ಪೂರಕ ಬೇಡಿಕೆಗಳು ಇರಬಹುದು ಎಂದು ಭಾವಿಸಿದ್ದೆ. ಆದರೆ, ಅದಕ್ಕೆ ಹೊರತಾದಂಥ ರೀತಿಯಲ್ಲಿ ಇವತ್ತಿನದಿವಸ ಈ ಪೂರಕ ಬೇಡಿಕೆಗಳು ಬಂದಿವೆ. ಆದ್ದರಿಂದಲೇ ನಾನು ಇದನ್ನು ವಿರೋಧ ಮಾಡಬೇಕೆಂಬ ತೀರ್ಮಾನಕ್ಕೆ ಬಂದಿರತಕ್ಕಂಥಾದ್ದು. ಇವತ್ತು ಮುಖ್ಯಮಂತ್ರಿಗಳು, ಅವರು ಮುಖ್ಯಮಂತ್ರಿಗಳಾಂಥ ಶುರುವಿನಲ್ಲಿ ಬಹಳ ಉದ್ದುದ್ದವಾದ ಮಾತುಗಳನ್ನು ಆಡಿದ್ದಾರೆ. ಬಹಳ ಸಂತೋಷ ಅವರ ಮಾತುಗಳನ್ನು ಕೆಲವು ಸಂದರ್ಭದಲ್ಲಿ ಕೇಳುವುದಕ್ಕೆ ಇಂಪಾಗಿರುತ್ತವೆ, ಬಹಳ ಚೆನ್ನಾಗಿಯೂ ಇರುತ್ತದೆ. ಏನೋ ಆಗಿಹೋಯಿತು, ಆಕಾಶವನ್ನೇ ಭೂಮಿಗೆ ಇಳಿಸತಕ್ಕ ಶಕ್ತಿ ಹೊಂದಿರತಕ್ಕ ಮುಖ್ಯಮಂತ್ರಿಗಳು ನಮ್ಮ ರಾಜ್ಯದಲ್ಲಿ ಸಿಕ್ಕಿದ್ದಾರೆ. ಈ ರಾಜ್ಯದ ಜನತೆಯ ಸೌಭಾಗ್ಯ ಎಂದು ಪತ್ರಿಕೆ

ಓದಿದಾಗ ಅನಿಸುತ್ತದೆ. ಆದರೆ, ವಾಸ್ತವವಾಗಿ ಆ ತರಹ ಇಲ್ಲ. ಉದಾಹಾರಣಾರ್ಥವಾಗಿ, ನಾನು ಕೆಲವು ಗುರುತರವಾದಂಥ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಪತ್ರದ ಮೂಲಕ ಬರೆದಿದ್ದೇನೆ.

ಈ ಸದನದಲ್ಲೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಇಲ್ಲಿಯವರೆಗೂ ಅದು ಯಾವುದಕ್ಕೂ ಕ್ರಮ ತೆಗೆದುಕೊಂಡಿಲ್ಲ. ಉದಾಹರಣಾರ್ಥವಾಗಿ ನಮ್ಮ ಕೋಲಾರ ಜಿಲ್ಲಾಪರಿಷತ್ತಿನಲ್ಲಿ ನಡೆದಂಥ ಅವ್ಯವಹಾರ. ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂ ಎಂದು ಹೇಳುತ್ತಾರೆ. ಮತ್ತೆ ವ್ಯವಸಾಯಾಭಿವೃದ್ಧಿಗೆ ಭೂಸಾರ ಸಂರಕ್ಷಣಾ ಕಾರ್ಯಕ್ರಮ ಎಂದು ಏನು ಹೇಳುತ್ತೇವೆ, ಆ ಕಾರ್ಯಕ್ರಮಗಳಲ್ಲಿ ನಡೆದಿದೆ. ಕಳೆದ, ಹೋದವರ್ಷ, ಒಂದೊಂದು ಮಂಡಲ್ ಪಂಚಾಯಿತಿಗೆ ನಿಮ್ಮ ವರ್ಗಗಳಿಗೆ ಸಂಬಂಧಪಟ್ಟಂತೆ, ಯಾರು ಕೊಳವೆ ಬಾವಿಯನ್ನು ಹಾಕಿಸಿರುತ್ತಾರೋ ಅವರಿಗೆ, ಸುಮಾರು 10ರಿಂದ 12 ಸಾವಿರ ರೂಪಾಯಿಗಳಲ್ಲಿ, ಒಂದು ಮಂಡಲ್ ಪಂಚಾಯ್ತಿಗೆ 20-20 ಕಲ್ಲಿನ ತೊಟ್ಟಿಗಳನ್ನು ಕಟ್ಟತಕ್ಕ ಕಾರ್ಯಕ್ರಮವನ್ನು ಹಾಕಿದರು.

ಅದನ್ನು ನಾನು ಬಹಳ ಸಂತೋಷವಾಗಿ ಸ್ವಾಗತ ಮಾಡಿದೆ. ಕಾರಣ ಏನೆಂದರೆ ಈ ವಿದ್ಯುತ್ ಅಡೆತಡೆಗಳಿಂದ ನಮಗೆ ಅನೇಕ ತೊಂದರೆ ಆಗುತ್ತಿತ್ತು. ವಿದ್ಯುತ್ ಇರತಕ್ಕಂಥ ಸಂದರ್ಭದಲ್ಲಿ ಆ ಕಲ್ಲಿನ ತೊಟ್ಟಿಗೆ ನೀರನ್ನು ತುಂಬಿಸಿಕೊಂಡು ಬೇಕಾಗಿರತಕ್ಕಂಥ ಸಂದರ್ಭದಲ್ಲಿ ಬೆಳೆಗೆ ನೀರನ್ನು ಉಪಯೋಗಿಸಿಕೊಳ್ಳತಕ್ಕಂಥ ಅವಕಾಶ ಒದಗಿ ಬಂತು. ಇದು ನಿಮ್ಮ ವರ್ಗದವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದ್ದರಿಂದ ನಾನು ಬಹಳ ಸಂತೋಷದಿಂದ ಸ್ವಾಗತ ಮಾಡಿದೆ. ಮತ್ತೆ ನಾನು ಕಣ್ಣಲ್ಲಿ ಕಣ್ಣಿಟ್ಟು ಇಡೀ ಜಿಲ್ಲೆಯಲ್ಲಿ ಕೆಲವು ಕಡೆ ನಾನನು ಹೋಗಿ ನೋಡಿ ಕೊಂಡು ಬಂದೆ. ಸ್ವಾಮಿ ಸುಮಾರು 5-6 ಸಾವಿರ ರೂಪಾಯಿಗಳಿಂದ ಕಟ್ಟತಕ್ಕಂಥ ಕಲ್ಲಿನ ತೊಟ್ಟಿಗೆ 12 ಸಾವಿರ ರೂಪಾಯಿ ಖರ್ಚಾಯಿತು. 12 ಸಾವಿರ ರೂಪಾಯಿ ಖರ್ಚಾಗಿದೆ ಒಂದು ಕಲ್ಲಿನ ತೊಟ್ಟಿಗೆ. ಇದು ಒಂದೊಂದು ಮಂಡಲ್ ಪಂಚಾಯಿತಿಗೆ 20 ತೊಟ್ಟಿ ಪ್ರಕಾರ 129 ಮಂಡಲ್ ಪಂಚಾಯಿತಿಗಳು ಇದ್ದಾವೆ ನಮ್ಮ ಜಿಲ್ಲೆಯಲ್ಲಿ. ಈ ಒಂದು ಕಲ್ಲಿನ ತೊಟ್ಟಿಕಟ್ಟಿಸುವುದರಲ್ಲಿ ಎಲ್ಲಾ ಖರ್ಚುತೆಗೆದರೆ ಕನಿಷ್ಟ ಅಂದರೆ 3 ಸಾವಿರದಿಂದ 4 ಸಾವಿರ ರೂಪಾಯಿಗಳವರೆಗೂ ಅಧಿಕಾರಿಗಳ ಜೇಬಿಗೆ ಹೋಯಿತು. ಇದೇ ರೀತಿಯಲ್ಲಿ ಲೆಕ್ಕ ಹಾಕಿದರೆ ಸುಮಾರು ಈ ಒಂದು ಬಾಬಿನಲ್ಲಿ 72 ಲಕ್ಷ ರೂಪಾಯಿನಷ್ಟು ಹಣ ಅಧಿಕಾರಿಗಳ ಜೇಬಿಗೆ ಹೋಯಿತು. ಇದನ್ನು ಮುಖ್ಯಮಂತ್ರಿಗಳು ಕೋಲಾರಕ್ಕೆ ಬಂದಂಥ ಸಂದರ್ಭದಲ್ಲಿ ಅವರ ಎದುರಿನಲ್ಲೇ ಈ ರೀತಿ ಆಗಿದೆ ಎನ್ನತಕ್ಕಂಥ ಮಾತನ್ನು ಹೇಳಿದೆ. ಆ ಸಭೆಯಲ್ಲಿ ನಾನೊಬ್ಬನೇ ಇರಲಿಲ್ಲ. ನಮ್ಮ ಜಿಲ್ಲೆಯ ಬೇರೆ ಶಾಸಕರು ಸಹ ಇದ್ದರು. ಇವರು ಅಧಿಕಾರಿಗಳ ದಂಡಿನ ಸಮೇತ ಬಂದಿದ್ದರು. ಅಲ್ಲಿ ವೀರಾವೇಶದಲ್ಲಿ ಹೇಳಿದರು ಇದರ ಬಗ್ಗೆ ನಾನು ವಿಚಾರಣೆ ನಡೆಸುತ್ತೇನೆ ಎಂದು. ಏನಾಯಿತು ನಿಮ್ಮ ವಿಚಾರಣೆ? ಆಗಿದ್ದೇನು ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳು ಯಾರಿದ್ದರು ಆ ಜಿಲ್ಲಾ ಪರಿಷತ್ತಿನಲ್ಲಿ ಅವರಿಗೆ ಬಡ್ತಿ ಸಿಕ್ಕಿತು. ಬೇರೆ ಬೇರೆ ಕಡೆಗೆ ಬಡ್ತಿ ಪಡೆದುಕೊಂಡು ಹೋದರು. ಆದ್ದರಿಂದ ಏತಕ್ಕೆ ಈ ರೀತಿಯ ವೀರಾವೇಶದ ಮಾತುಗಳನ್ನು ನೀವು ಹೇಳುತ್ತೀರಿ? ಏನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡುತ್ತೇವೆಂದು ಹೇಳಿ. ನೀವು ಇತ್ತೀಚೆಗೆ ಈ ಭ್ರಷ್ಟಾಚಾರವನ್ನು ಮೂಲೋತ್ಪಾಟನೆ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಬಹಳ ಸಂತೋಷ. ಮಾನ್ಯ ಅಧ್ಯಕ್ಷರೇ, ಒಂದು ದಿವಸ ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ರೇಷ್ಮೆ ವಿಚಾರಕ್ಕೆ ಸಂಬಂಧಪಟ್ಟಂತೆ ಚರ್ಚೆ ನಡೆಯುತ್ತಿದ್ದಾಗ ಒಂದು ವಿಚಾರವನ್ನು ನಾನು ಅವರ ಗಮನಕ್ಕೆ ತಂದೆ. ಅವತ್ತು ರೇಷ್ಮೆ ಮಂತ್ರಿಗಳು ಸಹ

ಇದ್ದರು. ಜಿಲ್ಲೆಯ ಎಲ್ಲಾ ಶಾಸಕರುಗಳು ಇದ್ದರು. ಸುಮಾರು 50ರಿಂದ 60 ರೂಪಾಯಿ ಬೆಲೆ ಈ ರೇಷ್ಮೆಹುಳ ಗೂಡುಕಟ್ಟತಕ್ಕಂಥ ಚಂದ್ರಿಕೆಗೆ 132 ರೂಪಾಯಿ ಕೊಟ್ಟಿದ್ದಾರೆ. ಈ ಒಂದು ಬಾಬಿನಲ್ಲಿ ಸುಮಾರು 30-35 ಲಕ್ಷ ರೂಪಾಯಿಗಳನ್ನು ಈ ಚಂದ್ರಿಕೆ ಗೂಡಿಗೆ ಕೊಡತಕ್ಕಂಥಾದ್ದರಲ್ಲಿ ನಿಮ್ಮ ಅಧಿಕಾರಿಗಳು ಹೊಡೆದಿದ್ದಾರೆ ಹುಳ ತಾಕತಕ್ಕಂಥ ತಟ್ಟೆ ಇದು ಒಟ್ಟಿನಲ್ಲಿ ಈ ರೇಷ್ಮೆ ಇಲಾಖೆಗೆ ಸಂಬಂಧಪಟ್ಟಂತೆ ಸುಮಾರು 60-70 ಕೋಟಿ ರೂಪಾಯಿಗಳಷ್ಟು ದುರುಪಯೋಗ ಆಯಿತು. ಅನೇಕರು ಹೊಡೆದಿದ್ದಾರೆ. ಅದೇ ರೀತಿಯಲ್ಲಿ ಶಾಲೆಗಳಿಗೆ ಒದಗಿಸತಕ್ಕಂಥ ಪೀಠೋಪಕರಣಗಳು. ಮಕ್ಕಳಿಗೆ ಕೊಡತಕ್ಕಂಥ ಆಟಪಾಠದಸಾಮಾನುಗಳು ಇದೆಲ್ಲದರಲ್ಲೂ ಕೂಡ ಹೊಡೆದರು. ಅದರ ಜೊತೆಗೆ ಮಾನ್ಯ ಘೋರ್ಪಡೆಯವರ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ಈ ಜಿಲ್ಲಾ ಪರಿಷತ್ತಿನಲ್ಲಿರತಕ್ಕಂಥ ಪಿ.ಎಚ್.ಇ. ಇಲಾಖೆಯಲ್ಲಿ ಈ ಜಿಲ್ಲಾ ಪರಿಷತ್ತು ಎಕ್ಸಿಕ್ಯೂಟೀವ್ ಇಂಜನೀಯರ್ ಆಫೀಸ್ ಚಿಕ್ಕಬಳ್ಳಾಪುರದಲ್ಲಿ ಆಗಿರುವಂತಹ ವಿಷಯವನ್ನು ನಾನು ಇದೇ ಸದನದಲ್ಲಿ ಪ್ರಸ್ತಾಪ ಮಾಡಿದೆ. ಸುಮಾರು 5 ಕೋಟಿ ರೂಪಾಯಿಗಳಷ್ಟು ದುರುಪಯೋಗ ಆಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದೆ. ಇಲ್ಲೇ ಪ್ರಸ್ತಾಪ ಆಯಿತು. ನಾವು ಅದನ್ನು ವಿಚಾರಣೆಗೆ ಲೋಕಾಯುಕ್ತಕ್ಕೆ ಕಳುಹಿಸಿದ್ದೇವೆ ಎಂದು ಹೇಳಿದರು. ಏನಾದರೂ ಒಂದು ಅವ್ಯವಹಾರ ನಡೆದರೆ ಅದನ್ನು ಮುಚ್ಚಿ ಹಾಕುವುದಕ್ಕೆ ಲೋಕಾಯುಕ್ತಕ್ಕೆ ಕಳುಹಿಸಬೇಕು ಅಷ್ಟೇ. ಅದು ಯಾವತ್ತಿಗೂ ಬೆಳಕು ಕಾಣುವುದಿಲ್ಲ ಯಾರ ಗಮನಕ್ಕೂ ಕೂಡ ಬರುವುದಿಲ್ಲ. ಮಾನ್ಯ ಘೋರ್ಪಡೆಯವರ ಗಮನಕ್ಕೆ ಏನಾದರೂ ಬಂದಿದೆಯೋ ಏನೋ ನನಗೆ ಗೊತ್ತಿಲ್ಲ. ಇಲ್ಲಾ ಸ್ವಾಮಿ ಅದು ನಿಮ್ಮ ಗಮನಕ್ಕೆ ಬರುವುದಿಲ್ಲ. ಅವು ಅಲ್ಲೇ ಕಣ್ಮರೆ ಆಗಿಬಿಡುತ್ತವೆ. ಸುಮಾರು 5 ಕೋಟಿ ರೂಪಾಯಿ ದುರ್ವ್ಯವಹಾರ ನಡೆಸಿದಂತಹ ಎಕ್ಸಿಕ್ಯೂಟೀವ್ ಇಂಜನೀಯರಿಗೆ ಏನು ಮಾಡಿದರು ಅಂದ್ರೆ ಸೂಪರಿಟೇಡಿಂಗ್ ಇಂಜನೀಯರ್ ಆಗಿ ಪ್ರಮೋಶನ್ ಕೊಟ್ಟು ಸಣ್ಣ ಹುಲ್ಲುಗಾವಲಿನಿಂದ ಅತ್ಯಂತ ಫಲವತ್ತಾದ ಹುಲ್ಲುಗಾವಲು ಬೆಂಗಳೂರು ಡೆವಲಪ್ಮೆಂಟ್ ಅಥಾರಿಟಿಗೆ ವರ್ಗ ಮಾಡಿದರು. ನೀವು ಎಲ್ಲಿಗಾದರೂ ವರ್ಗ ಮಾಡಿಕೊಳ್ಳಿ ಏಕೆಂದರೆ ನೀವು ಹೇಳುವುದಕ್ಕೂ ಕಾರ್ಯಗತ ಮಾಡುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ ಭೂಮಿ ಆಕಾಶಕ್ಕೂ ಇರುವಷ್ಟು ವ್ಯತ್ಯಾಸ ಇದೆ.

ಅಧ್ಯಕ್ಷರು : ತಾವು ಸಪ್ಲಿಮೆಂಟರಿ ಮೇಲೆ ಇನ್ನು ಹೆಚ್ಚುಬೆಳಕು ಚೆಲ್ಲಿ.

ಶ್ರೀ ಸಿ. ಬೈರೇಗೌಡ : ಆಯಿತು. ಕೊನೆಗೆ ಬರುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ ಆದ್ದರಿಂದ ನಾನು ಮುಖ್ಯಮಂತ್ರಿಗಳಿಗೆ ಹೇಳತಕ್ಕಂಥಾದ್ದು ಏನೆಂದರೆ ಸ್ವಾಮಿ ನೀವು ಜನಗಳನ್ನು ಮೆಚ್ಚಿಸಲಿಕ್ಕೆ ಹೇಳುತ್ತಾ ಕಾಲ ಕಳೆದರೆ ನೀವು ಜನಗಳ ಮೆಚ್ಚುಗೆ ಪಡೆಯಲು ಆಗುವುದಿಲ್ಲ. ನೀವು ಏನು ಹೇಳುತ್ತೀರಿ ಅದನ್ನು ಕಾರ್ಯಗತ ಮಾಡಿದಾಗ ಮಾತ್ರ ಜನ ಮೆಚ್ಚುತ್ತಾರೆ. ಅದು ಇಲ್ಲದೆ ಜನರನ್ನು ಮೆಚ್ಚಿಸತಕ್ಕಂಥ ಮಾತು ಎಷ್ಟು ದಿವಸ? ಎಷ್ಟು ದಿವಸ ಅಂತ ನೀವು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯ ಇದೆ, ಇದು ಆಗುವುದಿಲ್ಲ. ಅದರಿಂದ ಪ್ರತಿಫಲ ನಿಮಗೆ ಸಿಗುವುದಿಲ್ಲ. ನೀವು ಕೊನೆಯ ಪಕ್ಷ ಇನ್ನು ಮುಂದೆ ಏನೇನು ಹೇಳಿಕೆಯನ್ನು ಕೊಡುತ್ತೀರೋ ಗೊತ್ತಿಲ್ಲ. ಆದರೆ ಇಲ್ಲಿಯವರೆಗೂ ಹೇಳಿದ್ದಿರಲ್ಲ ಅದನ್ನಾದರೂ ಕಾರ್ಯಗತ ಮಾಡುವುದಕ್ಕೆ ದಯವಿಟ್ಟು ಮುಂದಾಗಿ. ಈಗ ಮಾನ್ಯ ಚಂದ್ರೇಗೌಡರು ಇಂಡಸ್ಟ್ರೀಸ್ ಡಿಪಾರ್ಟ್ಮೆಂಟ್ ಬಗ್ಗೆ ಪ್ರಸ್ತಾಪ ಮಾಡಿದರು. ಈ ಕೆ.ಎಸ್.ಐ.ಎಂ.ಎಸ್.ಎಲ್.ನಲ್ಲಿ ಮೊನ್ನೆ ಆಶ್ರಯ ಯೋಜನೆಯಲ್ಲಿ ಕಬ್ಬಿಣದ್ದು ಕೊಡುವುದಕ್ಕೆ ಈ ಕಿಟಕಿ ಬಾಗಿಲು ತಯಾರು ಮಾಡಿದರು. ಅದನ್ನು ಈ ಕೆ.ಎಸ್.ಐ.ಎಂ.ಎಸ್.ಐ. ಮೂಲಕವೇ ತೆಗೆದುಕೊಳ್ಳುವುದು ಸ್ವಾಮಿ ಅಂತಹ ಮೋಸದ ಸಂಸ್ಥೆ ಈ ಭೂಮಿಯ ಮೇಲೆ ಇನ್ನೊಂದು ಇಲ್ಲ. ಏಕೆಂದರೆ

ಟೆಂಡರ್ ಕರೆಯುವಷ್ಟು ಇಲ್ಲ ಇನ್ನೊಂದು ಇಲ್ಲ. ಅವರು ಒಂದು ದರವನ್ನು ನಿಗದಿಪಡಿಸಿರುತ್ತಾರೆ. ಒಂದು ಪಟ್ಟಿ ಇದೆ ಆ ಪುಸ್ತಕ ಎಲ್ಲಾ ನಾನು ತರಿಸಿ ನೋಡಿದೆ. ಈ ಟೇಬಲ್ಗೆ ಇಷ್ಟು ಈ ಅಲ್ಮೇರಾಗೆ ಇಷ್ಟು. ಅಂತ ಆದರೆ ಅದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ ಸುಮಾರು 500 ರೂಪಾಯಿ ಬೆಲೆ ಬಾಳತಕ್ಕಂಥ ಫೋಲ್ಡಿಂಗ್ ಡೆಸ್ಕ್ ಈ ಹುಡುಗರು ಕುಳಿತುಕೊಳ್ಳತಕ್ಕಂಥ ಫೋಲ್ಡಿಂಗ್ ಡೆಸ್ಕ್‌ಗೆ ನಿಮ್ಮ ಕೆ.ಎಸ್.ಐ.ಎಂ.ಎಸ್.ನವರು ತರಿಸಿದರೆ 1500 ರೂಪಾಯಿ ಚಿಲ್ಲರೆ ಆಗುತ್ತದೆ. ನಾನು ಒಂದು ಉದಾಹರಣೆ ಮಾತ್ರ ಕೊಟ್ಟೆ ಅಷ್ಟೇ. ನೀವು ಹೇಳಿದಹಾಗೆ ಇದು ಪೂರಕ ಬೇಡಿಕೆ ಆಗಿರುವುದರಿಂದ ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇತ್ತೀಚೆಗೆ ಸ್ವಾಮಿ ನಮ್ಮ ಕ್ಷೇತ್ರದಲ್ಲಿ ಈ ಕಿಟಕಿ ಬಾಗಿಲು ಕಬ್ಬಿಣದಲ್ಲಿ ಮಾಡಿರತಕ್ಕಂಥಾದ್ದನ್ನು ಯಾವ ರೀತಿ ಮಾಡಿದ್ದಾರೆಂದು ತಂದು ತೋರಿಸಿದರು. ಏಕೆಂದರೆ ಬಡವರ ಕಾರ್ಯಕ್ರಮ ನಮ್ಮ ಮುಖ್ಯ ಮಂತ್ರಿಗಳಿಗೆ ಬಹಳ ಮೆಚ್ಚುಗೆ ಆಗಿರತಕ್ಕಂಥ ಕಾರ್ಯಕ್ರಮ. ಬಹಳ ಸಂತೋಷ.

ಹಾಗೆ ನೋಡೋಣ ಇದು ಯಾವ ರೀತಿ ಇದೆ ಅಂತ ಹೇಳಿ ನಾನು ಕೈಯಲ್ಲಿ ಹಿಡಿದು ನೋಡಿದೆ ಅದನ್ನು ವೆಲ್ಡ್ ಮಾಡಿದ್ದರೆ ಫ್ರೇಮ್ ಅದಕ್ಕೆ 18 ಗೇಜ್ ಶೀಟ್ ಹಾಕಬೇಕಾಗಿತ್ತು. ಇದು ಯಾವ ತರಹ ಇದೆ ಎಂದು ನೋಡಿದರೆ ಥಿನ್ ಶೀಟ್ ಹಾಕಿದ್ದಾರೆ. ಅಷ್ಟೇ ಥಿಕ್ನೆಸ್ ಇರತಕ್ಕಂಥಾದ್ದು. ಆಗಲಿ ನೋಡೋಣ ಎಷ್ಟು ಮಾತ್ರ ತಡೆಯುತ್ತದೆಂದು ಹೇಳಿ ಕೈಯಲ್ಲಿ ನಾನು ಒಂದು ಸಾಲಿಗುದ್ದಿದೆ ಆ ವೆಲ್ಡ್ ಮಾಡಿರತಕ್ಕಂಥ ಶೀಟ್ ಅನಾಮತ್ ಆಗಿ ಕಿತ್ತು ಬಂತು. ಇದನ್ನು ತೆಗೆದುಕೊಂಡು ಹೋಗಿ ನೀವು ಆಶ್ರಯ ಯೋಜನೆಯಲ್ಲಿ ಇದನ್ನು ನೀವು ಬಡವರಿಗೆ ಕೊಡುವುದಕ್ಕೆ ಹೊರಟಿದ್ದೀರಿ. ನಾನು ಜಿಲ್ಲಾಧಿಕಾರಿಗಳ ಗಮನಕ್ಕೆ ತಕ್ಷಣ ತಂದೆ. ಅವರು ಹಣ ಪಾವತಿ ಮಾಡುವುದಕ್ಕೆ ನಿಲ್ಲಿಸಿ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಅಲ್ಲಿ ಇಲ್ಲಿ ಅಪ್ಪಿತಪ್ಪಿ ಕ್ರಮ ತೆಗೆದುಕೊಳ್ಳತಕ್ಕಂಥ ಒಬ್ಬ ಅಧಿಕಾರಿ ಕ್ರಮ ತೆಗೆದುಕೊಳ್ಳಬಹುದು. ಆದರೆ ಎಲ್ಲದರಲ್ಲೂ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ನಂಬಿಕೆ ನನಗೇನೂ ಇಲ್ಲ. ಅದೇನು ಮಾಡುತ್ತಾರೋ ನೋಡೋಣ ನಮ್ಮ ಜಿಲ್ಲಾಧಿಕಾರಿಗಳು. ಆಮೇಲೆ ಕಾರ್ಖಾನೆಗಳ ಬಗ್ಗೆ ನಮ್ಮ ಮಾನ್ಯ ನಂಜುಂಡಸ್ವಾಮಿಯವರು ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳ ಬಗ್ಗೆ ಹೇಳಿದ್ದಾರೆ. ನಾನು ಅದನ್ನು ವಿಸ್ತಾರವಾಗಿ ಹೇಳಬೇಕು ಎಂದು ಇದ್ದೇನೆ. ಒಂದು ಸೂಕ್ಷ್ಮವಾದ ವಿಚಾರವನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ ಮಾನ್ಯ ಅಧ್ಯಕ್ಷರೇ. ಇವತ್ತು ನಮ್ಮ ರಾಜ್ಯಸ್ವಾಮ್ಯದ ಕಾರ್ಖಾನೆಗಳಲ್ಲಿ ಸಾರ್ವಜನಿಕ ಕಾರ್ಖಾನೆಗಳಲ್ಲಿ ಎನ್.ಜಿ.ಇ.ಎಫ್. ಬಹಳ ಮುಖ್ಯವಾಗಿರತಕ್ಕಂಥಾದ್ದು. ಬಹಳ ಆರೋಗ್ಯವಾಗಿ ಇದ್ದಂತಹ ಕಾರ್ಖಾನೆ ಅದು, ಅದಕ್ಕೆ ಕೆಲವು ಅಧಿಕಾರಿಗಳು ಕಾಗೆ ದೂರಿದಂತೆ ದೂರಿದರು ಆ ಕಾರ್ಖಾನೆಗೆ. ನಮ್ಮ ಕಡೆ ಒಳ್ಳೆಯ ಮನೆಗೆ ಕಾಗೆ ದೂರಿತು ಅಂತ ಹೇಳುತ್ತಾರೆ. ಏಕೆ ಅಂದರೆ, ಅದು ಸರ್ವನಾಶ ಆಗಿ ಹೋಗುತ್ತದೆ ಎಂದು. ಕೆಲವು ಅಧಿಕಾರಿಗಳು ಕಾಗೆದೂರಿದಂಗೆ ದೂರಿದರು ಆ ಕಾರ್ಖಾನೆಗೆ. ಇವತ್ತಿನದಿವಸ ಅದು ಎಂತಹವರಿಗೆ ಆಗಲಿ ಸ್ವಲ್ಪ ಕಿಂಚಿತ್ತು ಅಭಿಮಾನ ರಾಜ್ಯದ ಬಗ್ಗೆ ರಾಜ್ಯದ ಜನತೆಯ ಬಗ್ಗೆ ಅಭಿಮಾನ ಇರತಕ್ಕಂಥವರಿಗೆ ಆ ಕಾರ್ಖಾನೆ ಕಥೆ ಕೇಳಿದರೆ ವ್ಯಥೆಯಾಗುತ್ತದೆ. ಇವತ್ತು ಅದನ್ನು ಮಾರಾಟ ಮಾಡತಕ್ಕಂಥ ತೀವ್ರವಾದ ಪ್ರಯತ್ನ ನಡೆದಿದೆ. ಈಗಲೂ ಸಹ ನಾನು ಒಂದು ಪತ್ರವನ್ನು ತಮಗೆ ಕಳುಹಿಸಿದ್ದೇನೆ. ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ. ನಾನು ನಿಯಮ 69ರ ಪ್ರಕಾರ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಇದನ್ನು ಚರ್ಚೆ ಮಾಡುವುದಕ್ಕೆ ದಯವಿಟ್ಟು ತಾವು ಅವಕಾಶ ಕೊಡಬೇಕು ಅದನ್ನು ನಾನು ವಿಸ್ತಾರವಾಗಿ ಹೇಳುವವನು ಇದ್ದೇನೆ. ಈ ಅಧಿಕಾರಿಗಳು ಕೆಲವರು ಇದ್ದಾರೆ ಅವರ ಬಗ್ಗೆ ಹಿಂದೆ ಒಂದು ಸಾರಿ ಹೇಳಿದ್ದೆ. ಕೆಲವು ಅಧಿಕಾರಿಗಳು ಹೇಗೆ

ಇದ್ದಾರೆಂದರೆ, ನಾನು ಎಲ್ಲರನ್ನೂ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ ಕೆಲವು ಅಧಿಕಾರಿಗಳು ಇದ್ದಾರೆ ಅವರು "ಹಚ್ಚಗೆ ಇದ್ದ ಕಡೆ ಮೇಯುವುದು ಬೆಚ್ಚಗೆ ಇದ್ದ ಕಡೆ ಬಂದು ಮಲಗುವುದು" ಮೇಯಲಿಕ್ಕೆ ಕೆಲವು ಅಧಿಕಾರಿಗಳಿಗೆ ಇವು ದೊಡ್ಡ ದೊಡ್ಡ ಹುಲ್ಲುಗಾವಲುಗಳಾಗಿ ನಮ್ಮ ಸಾರ್ವಜನಿಕ ಉದ್ದಿಮೆಗಳು ಕೆಲಸ ಮಾಡುತ್ತಿವೆ. ಅದರ ಜೊತೆಗೆ ದೊಡ್ಡ ದೊಡ್ಡ ವ್ಯಕ್ತಿಗಳು ದೊಡ್ಡ ದೊಡ್ಡ ಶಕ್ತಿಗಳು ಕೂಡ ಇದ್ದಾರೆ. ಎನ್.ಜಿ.ಇ.ಎಫ್.ಗೆ ದೊಡ್ಡ ಶಕ್ತಿಗಳು ದೊಡ್ಡ ವ್ಯಕ್ತಿಗಳು ಇವರೆಲ್ಲರ ಪಾತ್ರ ಇದರಲ್ಲಿದೆ. ಅದರ ಬಗ್ಗೆ ನಾನು ವಿಸ್ತಾರವಾಗಿ ಹೇಳುವವನಿದ್ದೇನೆ ನನಗೆ ದಯವಿಟ್ಟು ಅವಕಾಶ ಕೊಡಬೇಕು. ಸ್ವಾಮಿ ನಮಗೂ ಕೂಡ ಒಂದು ಇತಿಮಿತಿ ಇದೆ ಎಷ್ಟು ಸಾರಿ ನಾವು ಸರ್ಕಾರದ ಗಮನಕ್ಕೆ ತರೋಣ ಹೇಳಿ. ಇವತ್ತು ತಪ್ಪಾಗಿ ನಾವೇನಾದರೂ ಸರ್ಕಾರದ ಮೇಲೆ ಆರೋಪ ಹೊರಿಸುತ್ತಿದ್ದರೆ, ಇಲ್ಲಾ, ನಿಮ್ಮದು ತಪ್ಪು ಅಂತ ಹೇಳಿ ನಾವು ತಲೆ ತಗ್ಗಿಸುವುದಕ್ಕೆ ತಯಾರಾಗಿದ್ದೇವೆ.

ತಪ್ಪಾಗಿದ್ದರೆ ನಾವು ಸಾರ್ವಜನಿಕವಾಗಿ ಕ್ಷಮೆ ಕೇಳುವುದಕ್ಕೆ ತಯಾರಾಗಿದ್ದೇವೆ. ನಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡುವುದಕ್ಕೆ ತಾವುಗಳು ಏಕೆ ಹೊರಟಿದ್ದೀರಿ ಇದನ್ನು ನಾವು ಸಾರ್ವಜನಿಕರ ಹಿತದೃಷ್ಟಿಯಿಂದ ಸರಕಾರದ ಗಮನಕ್ಕೆ ತರುತ್ತಾ ಇದ್ದೇವೆಯೇ ವಿನಹ ಬೇರೆ ಯಾವ ಉದ್ದೇಶಗಳೂ ನಮ್ಮಲ್ಲಿ ಇಲ್ಲ ಎಂಬ ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ನೀವು ನಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡುವುದಕ್ಕೆ ಹೋಗಬೇಡಿ. ಕೊನೆಯ ಪಕ್ಷ ಸ್ಯಾಂಪಲ್ ಎಂದು ಎಲ್ಲಾದರೂ ಕೆಲವು ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡರೆ, ಅದರ ಮೂಲಕ ಬೇರೆಯವರು ಎಚ್ಚರವಾಗುತ್ತಾರೆ, ಈ ರೀತಿಯ ಅನಾಹುತಗಳು ಎಲ್ಲಿ ಆಗುತ್ತಿವೆ ಅವುಗಳು ಸ್ವಲ್ಪಮಟ್ಟಿಗಾದರೂ ಕಡಿಮೆಯಾಗುತ್ತವೆ. ಹೀಗೆ ನಿಮ್ಮ ಕೈಯಲ್ಲಿ ನೂರಕ್ಕೆ ನೂರರಷ್ಟು ತಡೆದು ಹಾಕುತ್ತೇವೆ ಅಂದರೆ ಅದು ಆಗುವುದಿಲ್ಲ. ಒಂದು ವೇಳೆ ನಾನೇ ನಿಮ್ಮ ಸ್ಥಾನದಲ್ಲಿದ್ದರೂ ಕೂಡ ಅದು ಸಾಧ್ಯವಾಗುವುದಿಲ್ಲ. ಇದು ಯಾರ ಕೈಯಲ್ಲೂ ಸಾಧ್ಯವಾಗುವುದಿಲ್ಲ ಎಂಬ ಮಾತನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಖಂಡಿತವಾಗಿಯೂ ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ. ಇವೊತ್ತಿನ ದಿವಸ ಇವುಗಳನ್ನು ಕಡಿಮೆ ಮಾಡುವ ಬದಲು ಹೆಚ್ಚು ಪ್ರಮಾಣದಲ್ಲಿ ಇಂಥ ಕೃತ್ಯಗಳು ಆಗುತ್ತಿವೆ. ನಮ್ಮ ಮುಖ್ಯಮಂತ್ರಿಯವರು ವೀರಾವೇಶದಿಂದ ಮಾತನಾಡುವಂಥ ಎಲ್ಲಾ ಮಜಲುಗಳನ್ನು ಕಲಿತಿದ್ದಾರೆ. ದಕ್ಷಿಣ ಕನ್ನಡದವರಾಗಿರುವುದರಿಂದ ಅವರು ಯಕ್ಷಗಾನದ ಎಲ್ಲ ಮಜಲುಗಳನ್ನು ಕಲಿತಿರುತ್ತಾರೆ. ಆದರೆ ನಿಮ್ಮ ಯಕ್ಷಗಾನವನ್ನು ನಮಗೆ ನೋಡಿ ನೋಡಿ ಸಾಕಾಗಿದೆ. ಅದನ್ನು ಬಿಟ್ಟು ದಯಮಾಡಿ ತಾವುಗಳು ಕೃತಿಗಿಳಿಯಿರಿ ಎಂದು ತಮ್ಮಲ್ಲಿ ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಮಗೆ ಒದಗಿಸಿದ ವಿವರಗಳಲ್ಲಿ ಮೊದಲನೇ ಕಂತು ಎರಡನೇಯ ಕಂತು ಎಂದು. ಕೊಟ್ಟಿದ್ದೀರಿ. ಇದರಿಂದಾಗಿ ನಮಗೆ ಸ್ವಲ್ಪ ತಬ್ಬಿಬ್ಬಾಗುತ್ತಾ ಇದೆ. ಎರಡನ್ನೂ ಒಂದೇ ಮಾಡಬಹುದಾಗಿತ್ತು. ಅವರು ಗೊಂದಲದಿಂದಾಗಿ ಹೀಗೆ ಮಾಡಿದ್ದಾರೆ. ಇದರಲ್ಲಿ ಬೆಂಗಳೂರು ನಗರದ ಸುತ್ತ ವರ್ತುಲ ರಸ್ತೆ ನಿರ್ಮಾಣ ಮಾಡಲು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ 200 ಲಕ್ಷ ರೂಪಾಯಿಗಳ ಸಾಲವನ್ನು ಮಂಜೂರು ಮಾಡಲಾಗಿದೆ. ಆಯವ್ಯಯದಲ್ಲಿ ಅದೇ ಉದ್ದೇಶಕ್ಕೆ ಹಣ ಬಿಡುಗಡೆ ಮಾಡಲು ಸಾಧ್ಯವಾಗಿಲ್ಲವಾದುದರಿಂದ ಈ ಹಣವನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದೀರಿ. ನಾನು ಈಗ ಕೇವಲ ಬೆಂಗಳೂರು ನಗರದ ಬಗ್ಗೆ ಮೊತ್ತ ತಮ್ಮ ಗಮನಕ್ಕೆ ಕೆಲವು ವಿಚಾರಗಳನ್ನು ತರುತ್ತೇನೆ. ಈ ನಮ್ಮ ಬೆಂಗಳೂರು ನಗರ ಕರ್ನಾಟಕದ

ರಾಜಧಾನಿ. ಬೆಂಗಳೂರು ನಗರದಲ್ಲಿ ತಾವೂ ವಾಸವಾಗಿದ್ದೀರಿ, ನಾವೂ ವಾಸವಾಗಿದ್ದೇವೆ ಇಡೀ ನಮ್ಮ ಸರಕಾರವೇ ಇಲ್ಲಿದೆ. ಈ ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಯ ಬಗ್ಗೆ ಇದುವರೆವಿಗೂ ಒಂದು ಹೊಸ ಚಿಂತನೆಯಾಗಿಲ್ಲ. ಬರೀ ಮಾತಿನಲ್ಲಿಯೇ ಅನೇಕ ಯೋಜನೆಗಳನ್ನು ಮಾಡುತ್ತಾ ಇದ್ದೇವೆ.

ಅನೇಕ ವ್ಯವಸ್ಥೆಗಳಿವೆ ಎಂದು ಹೇಳತಕ್ಕಂತಾದ್ದು . ಬರೀ ವಿಚಾರ ಸಂಕಿರಣಗಳಲ್ಲಿ ಪುಸ್ತಕಗಳ ಮುದ್ರಣಗಳಲ್ಲಿ ಉಳಿದಿದೆಯೇ ಹೊರತು ಇದರ ಸಮಗ್ರ ಬೆಳವಣಿಗೆಯ ಬಗ್ಗೆ ಒಂದು ಯೋಜನೆ ಮಾಡಿ, ಒಂದು ಚಿಂತನೆ ಮಾಡಿ, ಈ ಯೋಜನೆಯ ಅಂತರ್ಗತ ನಾವು ಇಷ್ಟು ವರ್ಷದೊಳಗಾಗಿ ಬೆಂಗಳೂರಿನ ಬೆಳವಣಿಗೆಯ ಬಗ್ಗೆ ಒಂದು ಹೊಸ ಚಿಂತನೆಯನ್ನು ಮಾಡಬೇಕೆನ್ನತಕ್ಕಂಥಾದ್ದು ಅವಶ್ಯಕ. ಈ ಬೆಂಗಳೂರನ್ನು ಕಟ್ಟಿದಂಥ ಮಹಾ ದಾತ ಕೆಂಪೇಗೌಡರನ್ನು ನಾವೆಲ್ಲರೂ ನೆನಸಿಕೊಳ್ಳಬೇಕು. ಅವರು ಬೆಂಗಳೂರಿನ ನಾಲ್ಕು ಕಡೆಗಳಲ್ಲಿಯೂ ಅವರು ಗೋಪುರಗಳನ್ನು ನಿರ್ಮಾಣ ಮಾಡಿದ್ದರು. ಅದನ್ನು ಸ್ಥಾಪನೆ ಮಾಡುವ ಉದ್ದೇಶ ಅಂದರೆ ಈ ಗೋಪುರಗಳನ್ನು ಮೀರಿ ಬೆಂಗಳೂರು ದಾಟ ಬಾರದು ಎಂಬುದಾಗಿತ್ತು. ನಾವು ಬೆಂಗಳೂರಿನ ಬೆಳವಣಿಗೆಯ ಬಗ್ಗೆ ಸಮಗ್ರವಾಗಿ ಚಿಂತನೆಯನ್ನು ಮಾಡುತ್ತಾ ಇಲ್ಲ. ಈ ಬೆಳವಣಿಗೆಯು ಎಷ್ಟು ನಾಗಾಲೋಟದಿಂದ ಓಡುತ್ತಿದೆ ಎಂದರೆ ಇದನ್ನು ತಡೆಯದೇ ಇದ್ದರೆ ಮುಂದೆ ಪರಿಸ್ಥಿತಿಯು ಏನಾದೀತು ಎಂಬ ಬಗ್ಗೆ ನಾವಿನ್ನೂ ಚಿಂತನೆ ಮಾಡಿಲ್ಲ. ಈಗ ಕುಡಿಯುವ ನೀರಿನ ವಿಚಾರ ತೆಗೆದುಕೊಂಡರೇ ಕಾವೇರಿ 1, 2, 3, ಸ್ಟೇಜ್‌ಗಳು ಎಂದು ಬರುತ್ತಾ ಇದೆ. ಸಾಕಾಗದಿದ್ದರೆ ಹೇಮಾವತಿಯಿಂದ ಕೂಡ ನೀರನ್ನು ತರಬೇಕೆಂಬ ಚಿಂತನೆಯೂ ಕೂಡ ಇರಬಹುದು.

ಶ್ರೀ ಚೌಡರೆಡ್ಡಿ : ಹೇಮಾವತಿಯಿಂದ ನೀರು ತರುವ ಚಿಂತನೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಆ ಚಿಂತನೆಯನ್ನು ಕೈಬಿಟ್ಟರಬಹುದು. ಕಾವೇರಿ ನೀರನ್ನೇ ತಾವುಗಳು ತರುತ್ತೀರಿ. ಹೀಗೆ ನಿಮಗೆ ಕಾವೇರಿ ನೀರನ್ನು ಬೆಂಗಳೂರಿನ ಎಲ್ಲಾ ಜನರಿಗೆ ಕೊಡುವುದಕ್ಕೆ ಸಾಧ್ಯವಾಗಲಾರದು. ಸಂಪೂರ್ಣವಾಗಿ ಎಲ್ಲಾ ಭಾಗಗಳಿಗೂ ಕಾವೇರಿ ನೀರನ್ನು ಕೊಡಲು ಸಾಧ್ಯವಾಗಲಿಲ್ಲ. ತಿಪ್ಪಗೊಂಡನಹಳ್ಳಿ, ಹೆಸರಘಟ್ಟದ ನೀರನ್ನು ಕೂಡ ಕೊಡುತ್ತಿದ್ದೀರಿ.

ಶ್ರೀ ಚೌಡರೆಡ್ಡಿ : ಕಾವೇರಿ ಮೂರನೆಯ ಸ್ಟೇಜ್ ಬಂದ ಮೇಲೆ ಎಲ್ಲಾ ಕಡೆಗೂ ಜಲಮಂಡಳಿಯವರು ಅದೇ ನೀರನ್ನು ಕೊಡುತ್ತಾ ಇದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್ : ಕಾವೇರಿ ನೀರನ್ನು ಎಲ್ಲಾ ಕಡೆಗಳಿಗೂ ಹಂಚತಕ್ಕಂಥ ಪರಿಸ್ಥಿತಿ ಇಲ್ಲ. ಈಗ ಬೆಂಗಳೂರು ನಗರದ ಬೆಳವಣಿಗೆ ಎಷ್ಟಾಗಿದೆ ಅಂದರೆ 46-47ಲಕ್ಷಗಳ ವರೆಗೆ ಇದೆ. ಅದನ್ನು ತಾವುಗಳು ಒಪ್ಪಿಕೊಳ್ಳುತ್ತೀರಿ. ಇನ್ನು ಮುಂದೆ ನಾವು ಎಲ್ಲಿಗೆ ಹೋಗುತ್ತಾ ಇದ್ದೇವೆ? ರಾಮನಗರಕ್ಕೆ ಸೇರುತ್ತಾ ಇದ್ದೇವೆ. ಆನೇಕಲ್ ಹತ್ತಿರಕ್ಕೆ ಹೋಗಿದ್ದೇವೆ, ಕನಕಪುರದ ಹತ್ತಿರಕ್ಕೆ ಹೋಗುತ್ತಾ ಇದ್ದೇವೆ, ಹೊಸಕೋಟೆಯ ಹತ್ತಿರ ಹೋಗುತ್ತಾ ಇದ್ದೇವೆ. ಇದೇ ರೀತಿಯಲ್ಲಿ ಬೆಳವಣಿಗೆಯಾದಾರೆ, ಬೆಂಗಳೂರಿನ ಜನಸಂಖ್ಯೆಯು ಕೇವಲ 5-10 ವರ್ಷಗಳಲ್ಲಿ ಒಂದು ಕೋಟಿಯ ಮೇಲೆ ಆಗುತ್ತದೆ. ಇದಕ್ಕೆ ಕಾರಣಗಳೂ ಕೂಡ ಸಾಕಷ್ಟು ಇವೆ. ಜನರು ಏನು ವಲಸೆ ಬರುತ್ತಾ ಇದ್ದಾರಲ್ಲ ಹೀಗೆ ವಲಸೆ ಬರುತ್ತಿರುವ ಜನರನ್ನು ತಡೆಯಲು ತಾವುಗಳು ಇದುವರೆಗೂ ಯಾವುದೇ ಒಂದು ಯೋಜನೆಯನ್ನು ರೂಪಿಸಿಲ್ಲ. ಮಾನ್ಯ ಸಂಸದೀಯ ಸಚಿವರು ಕೆಲವು ಕಡೆಗಳಲ್ಲಿ ಭಾಷಣ ಮಾಡಿ ಬೆಂಗಳೂರಿಗೆ ಬರತಕ್ಕಂಥವರನ್ನು ತಡೆಯಬೇಕೆಂದು ಹೇಳಿ, ಸ್ಪಷ್ಟವಾಗಿ ಅನೇಕ ಕಡೆಗಳಲ್ಲಿ ಹೇಳಿದ್ದಾರೆ. ನಮ್ಮ ಉನ್ನತ ಶಿಕ್ಷಣ ಮತ್ತು ಬೆಂಗಳೂರಿನ ಉಸ್ತುವಾರಿ ಸಚಿವರಾದ ಮಾನ್ಯ ಯಾಹ್ಯಾರವರು

ಕೂಡ ಈ ವಲಸೆಯನ್ನು ತಡೆಯಬೇಕೆಂದು ಹೇಳಿದ್ದಾರೆ. ಹಾಗಾದರೆ ಇದನ್ನು ತಡೆಯಲು ನೀವು ಯಾವ ಕ್ರಮಗಳನ್ನು ಕೈಗೊಂಡಿದ್ದೀರಿ?

ಶ್ರೀ ಚೌಡರೆಡ್ಡಿ : ನಾವು ಮೆಗಾಸಿಟಿ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಕೌಂಟರ್ ಮ್ಯಾಗ್ನೇಟ್ಸ್ ಎಂದು ಹೇಳಿ ತುಮಕೂರು, ರಾಮನಗರ, ಚೆನ್ನಪಟ್ಟಣ, ಮೈಸೂರು, ಇವುಗಳನ್ನೆಲ್ಲ ಡೆವಲಪ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅದು 1994 ರಿಂದ ಪ್ರಾರಂಭವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಹೊರಗಡೆಯಿಂದ ಬರತಕ್ಕಂಥವರಿಗೆ ಇನ್ನೂ ಅಗಲವಾಗಿ ವಿಶಾಲವಾಗಿ ಅನುಕೂಲ ಮಾಡಿಕೊಡತಕ್ಕಂಥಾದ್ದು ಆಗುತ್ತದೆ ಎಂದು ನಿಮ್ಮ ಈ ಯೋಜನೆ ಹೇಳುತ್ತದೆ. ಮೆಗಾಸಿಟಿ ಮಾಡಿ ಈ ಅನುಕೂಲಗಳನ್ನೆಲ್ಲಾ ಮಾಡಿಕೊಡುತ್ತೇವೆ, ವಲಸೆ ಬರುವವರಿಗೆ ಸುಂದರವಾಗಿ ಮಾಡಿಕೊಡುತ್ತೇವೆ ಎಂದು ನಿಮ್ಮ ಉದ್ದೇಶ ಇರಬಹುದು. ಆದರೆ ವಲಸೆ ತಡೆಯುವುದಕ್ಕೆ ಏನು ಯೋಜನೆ ಇದೆ ಎಂಬುದನ್ನು ಹೇಳಬೇಕು.

ಶ್ರೀ ಚೌಡರೆಡ್ಡಿ : ಬೆಂಗಳೂರಿಗೆ ಯಾವ ಯಾವ ಕಾರಣಗಳಿಗಾಗಿ ಜನರು ವಲಸೆ ಬರುತ್ತಿದ್ದಾರೆ? ಅದನ್ನು ಸ್ಟಡಿ ಮಾಡಿ, ಯಾವ ಫೆಸಿಲಿಟೀಸ್ ಗೋಸ್ಕರ ಬೆಂಗಳೂರಿಗೆ ಬರುತ್ತಿದ್ದಾರೆ ಎಂಬುದನ್ನು ನೋಡಿ ಅಂಥ ಫೆಸಿಲಿಟೀಸ್ನು ತುಮಕೂರು ಮೈಸೂರು, ರಾಮನಗರ ಮುಂತಾದ ಕಡೆಗಳಲ್ಲಿಯೊ ಸೃಷ್ಟಿಸಿ, ವಲಸೆ ಬರುವವರನ್ನು ಅಲ್ಲಿಗೆ ಡೈವರ್ಟ್ ಮಾಡುವ ದೃಷ್ಟಿಯಿಂದ ಹಾಗೆ ಮಾಡುತ್ತಿದ್ದೇವೆ. ಇದರಿಂದ ಬೆಂಗಳೂರಿಗೆ ವಲಸೆ ಬರುವುದು ಕಡಿಮೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಮಿಳುನಾಡಿನಿಂದ ಬೆಂಗಳೂರಿಗೆ ಮಿಡತೆ ದಂಡು ಬಂದ ಹಾಗೆ ಜನರು ಬರುತ್ತಾ ಇದ್ದಾರೆ. ಹಾಗೆಯೇ ಬೇರೆ ಬೇರೆ ರಾಜ್ಯಗಳಿಂದ ಇಲ್ಲಿಗೆ ಬಂದು ನುಗ್ಗುತ್ತಿದ್ದಾರಲ್ಲ ಅದಕ್ಕೆ ನೀವೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ?

ಶ್ರೀ ಚೌಡರೆಡ್ಡಿ : ಹಾಗಾದರೆ ನಾಲ್ಕೂ ಕಡೆಗಳಿಂದ ಗೇಟ್ ಹಾಕಿ ನಿಲ್ಲಿಸಿ ಬಿಡಲು ಆಗುತ್ತದೆಯೇ? ಅದು ಸಾಧ್ಯವೇ? ಆದರೆ ಯಾವ ಅನುಕೂಲಕ್ಕೋಸ್ಕರ ಬೇರೆ ಬೇರೆ ಕಡೆಗಳಿಂದ ಇಲ್ಲಿಗೆ ಬರುತ್ತಿದ್ದಾರೆ ಎಂಬುದನ್ನು ನೋಡಿ ಅಂಥ ಸೌಕರ್ಯಗಳನ್ನು ಬೇರೆ ಕಡೆಗಳಲ್ಲಿಯೂ ಸೃಷ್ಟಿಸಿ ಹಾಗೆ ವಲಸೆ ಬರುವವರು ಅಂಥ ಕಡೆಗಳಿಗೂ ಹೋಗುವಂತೆ ಮಾಡಬೇಕಾಗುತ್ತದೆ. ಬೆಂಗಳೂರಿಗೆ ಉದ್ಯೋಗಕ್ಕಾಗಿ, ಇಂಡಸ್ಟ್ರೀ ಮಾಡುವುದಕ್ಕಾಗಿ ಮತ್ತಿತರ ಕಾರಣಕ್ಕಾಗಿ ಬರುತ್ತಿರುತ್ತಾರೆ. ಅದೇ ವ್ಯವಸ್ಥೆಯನ್ನು ಬೇರೆ ಕಡೆಗಳಲ್ಲಿ ಮಾಡಿದರೆ ಅಲ್ಲಿಗೆ ಹೋಗುತ್ತಾರೆ. ಅದನ್ನೇ ನಾವು ಕೌಂಟರ್ಮ್ಯಾಗ್ನೆಟ್ಸ್ ಮೂಲಕ ಮಾಡಬಯಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಅದರಿಂದ ನಮಗೆ, ನಮ್ಮ ಕರ್ನಾಟಕದ ಜನರಿಗೆ ಹಾನಿ ಇದೆ. ನಮ್ಮ ಮಣ್ಣಿನ ಮಕ್ಕಳಿಗೆ ಹಾನಿ ಇದೆ ಎಂದು ನಾನು ಹೇಳುತ್ತಾ ಇದ್ದೇನೆ. ಬಂದವರಿಗೆಲ್ಲಾ ಉದ್ಯೋಗಗಳನ್ನು ಕೊಡುತ್ತೇವೆ ಎಂದು ನೀವು ಹೇಳಿ ವಿಧಾನ ಸೌಧದ ಬಾಗಿಲಲ್ಲಿ ಕುರ್ಚಿ, ಬೆಂಚುಗಳನ್ನು ಹಾಕಿಕೊಂಡು ಕುಳಿತರೆ ಲಾರಿಗಟ್ಟಲೆ, ರೈಲುಗಟ್ಟಲೆ ಜನರು ಬರುತ್ತಾರೆ.

ಅದನ್ನು ತಡೆದು ಇಲ್ಲಿಯ ಜನರಿಗೆ ಏನು ಅನುಕೂಲ ಮಾಡಿಕೊಡುತ್ತೀರಿ ಎಂಬ ಬಗ್ಗೆ ತಾವುಗಳು ಹೇಳಬೇಕು. ಅದನ್ನು ಬಿಟ್ಟು ವಲಸೆ ಬರುವವರಿಗೆ ಮಣೆ ಹಾಕುವುದು ಬೇಡ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಸಚಿವರು ಇಲ್ಲಿಗೆ ಕೈಗಾರಿಕೆಗಾಗಿ ಮತ್ತು ಕೆಲಸಕ್ಕಾಗಿ ಜನ ವಲಸೆ ಬರುತ್ತಿದ್ದಾರೆ ಎಂದು ಹೇಳಿದ್ದಾರೆ. ಹಾಗಾದರೆ

ನಿಮ್ಮ ಯೋಜನೆಗಳು ಏನು ಮಾಡುತ್ತಿವೆ? ನಗರವು ಈ ರೀತಿಯಲ್ಲಿ ಬೆಳೆಯುತ್ತಿರುವಾಗ ಮುಂದೆ ಅದಕ್ಕನುಗುಣವಾಗಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬ ದಿಶೆಯಲ್ಲಿ ನೀವು ಕೆಲಸ ಮಾಡಬೇಕಾಗುತ್ತದೆ. ಅದನ್ನು ಮಾಡಿದ್ದೀರಾ?

ಶ್ರೀ ಚೌಡರೆಡ್ಡಿ : ಅದಕ್ಕಾಗಿಯೇ ನಾವು ಅರ್ಬನ್ ಡೆವಲಪ್ಮೆಂಟ್ ಇನ್ಫ್ರಾಸ್ಟ್ರಕ್ಚರ್ ಕಾರ್ಪೋರೇಶನ್ ಮಾಡಿಕೊಂಡು ಅದಕ್ಕೆ ಬೇಕಾಗುವ ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತಿದ್ದೇವೆ. ಮೆಗಾಸಿಟಿ ಎಂದು ಮಾಡಿದ್ದೇವೆ. ಅದಕ್ಕೆ ಏಶಿಯನ್ ಡೆವಲಪ್ಮೆಂಟ್ ಬ್ಯಾಂಕ್‌ನವರು 800 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದಕ್ಕೋಸ್ಕರವಾಗಿ ಯಾವ ಆಕರ್ಷಣೆಗೋಸ್ಕರವಾಗಿ ಇಲ್ಲಿಗೆ ಜನರು ಬರುತ್ತಿದ್ದಾರೆ ಎಂಬುದನ್ನು ಸ್ಟಡಿ ಮಾಡುತ್ತಿದ್ದೇವೆ. ಇಲ್ಲಿಗೆ ಗ್ರಾಮಾಂತರಗಳಿಂದ, ಪೇಟೆ ಪಟ್ಟಣಗಳಿಂದ ಜನರು ಬರುತ್ತಿದ್ದಾರೆ. ಅವರಿಗೆ ಸುತ್ತಮುತ್ತ ಅಂಥ ವ್ಯವಸ್ಥೆ ಮಾಡಿಕೊಟ್ಟಲ್ಲಿ ಅವರು ಅಲ್ಲಿಗೇ ಹೋಗುತ್ತಾರೆ. ಅದಕ್ಕಾಗಿ ಸೂಕ್ತ ಯೋಜನೆಗಳನ್ನು ಹಾಕಿಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಪ್ರಶ್ನೆ ನಮ್ಮ ರಾಜ್ಯದ ಕಡೆಯಿಂದ ಹುಬ್ಬಳ್ಳಿ, ಮುಂತಾದ ಕಡೆಗಳಿಂದ ಬರುವ ಜನರ ಬಗ್ಗೆ ಅಲ್ಲ. ಇಲ್ಲಿಗೆ ಬೇರೆ ರಾಜ್ಯಗಳಿಂದ ಬರುತ್ತಿದ್ದಾರಲ್ಲ ಅವರ ಬಗ್ಗೆ ಏನು ಮಾಡುತ್ತೀರಿ?

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲೆ ಸಾಕಷ್ಟು ಅವಕಾಶ ಇದೆ, ಆಗ ಮಾತನಾಡಿ. ಸಪ್ಲಿಮೆಂಟರಿ ಬಡ್ಜೆಟ್ಟಿನ ಮೇಲೆ ಬೇಡ ಬೇಗನೆ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಮಾತನಾಡುವುದು ಬೇಡವೆಂದು ಹೇಳುತ್ತೀರಾ? ಪೂರಕ ಅಂದಾಜುಗಳೆಂದು 38 ಪುಟಗಳನ್ನು ಮುದ್ರಣಮಾಡಿ ನಮಗೆ ಕೊಟ್ಟಿದ್ದಾರೆ. ನಾವು ಎಲ್ಲಾ ಇಲಾಖೆಯನ್ನೂ ಕೈ ಮುಗಿದು ಒಪ್ಪಿಕೊಳ್ಳೋಣವೇ? ಹಾಗಾದರೆ ನಿಮಗೆಲ್ಲಾ ಒಳ್ಳೆಯದಾಗಲಿ. ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯ ಸದಸ್ಯರು ಸಮಾಜವಾದಿ ಹಿನ್ನೆಲೆಯಿಂದ ಬಂದಿರತಕ್ಕಂತಹವರು ಗೋಪಾಲಗೌಡರ ಜೊತೆ ಪಳಗಿದವರು ನಮ್ಮ ಆತ್ಮೀಯ ಸ್ನೇಹಿತರು. ಆದರೆ ಇತ್ತೀಚೆಗೆ ಏಕೋ ಯದ್ವಾತದ್ವ ಆಗುತ್ತಿದ್ದಾರೆ. ಅವರ ವಿಚಾರಧಾರೆ ದಾರಿ ತಪ್ಪುತ್ತಿದೆ ಮಂತ್ರಿ ಮಂಡಲಕ್ಕೆ ಹತ್ತಿರ ಹೋಗುತ್ತಿದ್ದಾರೆಂದು ಮಾನ್ಯ ಬೈರೇಗೌಡರು ಹೇಳುತ್ತಿದ್ದಾರೆ. ಅವರು ರಾಜಭವನಕ್ಕೆ ಹೋಗಬೇಕಲ್ಲ ಅದು ನಿಜವೇ?

+ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಬೈರೇಗೌಡರದ್ದು, ತಮ್ಮದು, ಕಾಗೋಡು ತಿಮ್ಮಪ್ಪನವರದ್ದು ಪ್ರೇಮ ಕಲಹ ಇದೆ ಅದರ ರಹಸ್ಯವೇನೆಂದು ನಮಗರ್ಥವಾಗುವುದಿಲ್ಲ. ಇತ್ತೀಚೆಗೆ ಬಹಳ ಮಾಡುತ್ತಿದ್ದೀರಿ. ಪೂರಕ ಅಂದಾಜುಗಳ ಬಗ್ಗೆ ಹಿರಿಯ ಸದಸ್ಯರಾದ ಏಕಾಂತಯ್ಯನವರು ಬೈರೇಗೌಡರು, ವಾಟಾಳ್ ನಾಗರಾಜ್ರವರು ಚಂದ್ರೇಗೌಡರು ಹಾಗೂ ಅನೇಕ ಸದಸ್ಯರು ತಮ್ಮ ಕೊಡುಗೆಗಳನ್ನು ಕೊಟ್ಟಿದ್ದಾರೆ. ಕೆಲವು ವಿಚಾರಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಪೂರಕ ಅಂದಾಜನ್ನು ಈ ಸದನದ ಮುಂದೆ ಹಾಜರು ಮಾಡಿದ್ದೇವೆ. ಇದರಲ್ಲಿ 3 ಭಾಗ ಇದೆ. ನಾವು ಕಂಟೆನ್ಜೆನ್ಸಿ ಫಂಡಿನಿಂದ ಅಡ್ವಾನ್ಸ್ ಅನ್ನು ರಿಲೀಸ್ ಮಾಡಿದ್ದೇವೆ. ಅದನ್ನು ಭರ್ತಿ ಮಾಡತಕ್ಕಂಥಾದ್ದು ಒಂದು ಪ್ರಕ್ರಿಯೆ. ಮತ್ತೊಂದು ಯಾವ ಅಕೌಂಟಿಂಗ್ ಅಡ್ಜೆಸ್ಟ್ಮೆಂಟ್ ಇದೆ ಅದಕ್ಕೆ ಈ ಸದನದ ಒಪ್ಪಿಗೆ ಪಡೆಯಬೇಕಾದ್ದು, ಇದೆ. ಅದು ಎರಡನೆಯದು. 3ನೇ ಭಾಗ ನಾವು ಕೆಲವು ಬಾಬುಗಳಲ್ಲಿ ಹೆಚ್ಚುವರಿ ಏನು ಖರ್ಚು ಮಾಡಿದ್ದೇವೆ, ಆಯವ್ಯಯದಲ್ಲಿ ಏನು ಕೊರತೆ ಇದೆ ಆ ಬಾಬುಗಳ ಬಗ್ಗೆ ಅದಕ್ಕೆ ಹೆಚ್ಚುವರಿ ಹಣವನ್ನು ಒದಗಿಸುವುದಕ್ಕೆ ನಾವಿಲ್ಲಿ ಮನ್ನಣೆಯನ್ನು ಕೊಡತಕ್ಕಂಥಾದ್ದು. ಈ ಮೂರು ಭಾಗ ಈ ಸದನದಲ್ಲಿ ಮಂಡಿಸುವಂತಹ ಪೂರಕ ಆಯವ್ಯಯದಲ್ಲಿ ಇದು ಸೇರಿದೆ. ಕಂಟೆನ್ಜೆನ್ಸಿ ಫಂಡಿನಲ್ಲಿ ನಮ್ಮಲ್ಲಿ ಹಣ ಮಿಕ್ಕಿರತಕ್ಕಂಥಾದ್ದು 80 ಕೋಟಿ ರೂಪಾಯಿಗಳು

ಇದರಲ್ಲಿ 71.82 ಕೋಟಿ ನಾವು ಬೇರೆ ಬೇರೆ ಬಾಬತ್ತಿನಲ್ಲಿ 1 ಮತ್ತು 2ನೇ ಕಂತಿನಲ್ಲಿ ಕಾಣಿಸಿದ್ದೇವೆ.

ಆದರೆ ನಮಗೆ ಖರ್ಚು ಮಾಡಿ ಉಳಿದಂತಹ ಹಣ ಕಂಟಿನ್ಜೆನ್ಸಿನಿಂದ 8 ಕೋಟಿ 18 ಲಕ್ಷ ರೂಪಾಯಿಗಳು. ಅದಕ್ಕೆ ಪೂರಕ ಬೇಡಿಕೆಗಾಗಿ ಇಲ್ಲಿ ಒಪ್ಪಿಗೆಗಾಗಿ ಬರಬೇಕಾದ ಅವಶ್ಯಕತೆ ನಮಗೆ ಬಂದಿದೆ. ಪೂರಕ ಅಂದಾಜಿನಲ್ಲಿ ಒಟ್ಟು ಇವತ್ತು ಬೇಡಿಕೆ ಕೊಟ್ಟಿದ್ದು 237.94 ಕೋಟಿಗಳಿಗೆ ಅದರಲ್ಲಿ ನಮಗೆ 60.10 ಲಕ್ಷ ರೂಪಾಯಿ ಕೇಂದ್ರದಿಂದ ನಮಗೆ ಸಹಾಯ ಬರುತ್ತದೆ. ಬರೀ ಅಡ್ವಾನ್ಸ್ ಕೊಟ್ಟು ಇಲ್ಲಿ ಖರ್ಚು ಮಾಡಿದ್ದೇವೆ ಅದು ಬರುತ್ತದೆ. ಅದರಿಂದ ನಮಗೆ ಹೆಚ್ಚುವರಿ ಎಂದು ಆಗುವುದಿಲ್ಲ. It is only a question of adjustment from the advance. 5 ಕೋಟಿ 1 ಲಕ್ಷ ರೂಪಾಯಿ ಏನು ಇದೆ ಅದು ನಮಗೆ ಬರಬೇಕಾದ್ದು. ಮತ್ತು 48.49 ಕೋಟಿ ಅಕೌಂಟ್ ಅಡ್ಜಸ್ಟ್‌ಮೆಂಟ್ ಅಷ್ಟೆ. ಅದರಲ್ಲಿ ಔಟ್ ಗೋ ಏನೂ ಇಲ್ಲ. ಆದರೆ net out go of cash from the consolidated fund ಎಷ್ಟು ಇದೆ ಅಂದರೆ 237.94 ಲಕ್ಷ ರೂಪಾಯಿಯಲ್ಲಿ 124.34 ಲಕ್ಷ ರೂಪಾಯಿಗಳು ಇದೆ. 237.94 ಕೋಟಿಯಲ್ಲಿ 159.09 ಕೋಟಿಗಳು ಅದು ಯೋಜನೆಯಲ್ಲಿ, ಯೋಜನೇತರ ಬಾಬತ್ತಿನಲ್ಲಿ 78.85 ಕೋಟಿ ಇವತ್ತು ಕೇಳಿದ್ದೇವೆ.

6.50 ಪಿ.ಎಂ

ಇದರಲ್ಲಿ ಪ್ರಮುಖವಾಗಿ ಕೆಲವು ಬಾಬುಗಳನ್ನು ನಾನು ತಮ್ಮ ಮುಂದೆ ಇಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಅದರಲ್ಲಿ ಫರ್ಟಿಲೈಸರ್ಸ್ ಸಬ್ಸಿಡಿ ಸ್ಕೀಮ್ ಆಫ್ ಗೌರ್ನಮೆಂಟ್ ಆಫ್ ಇಂಡಿಯಾ ಈ ಒಂದು ಹಣದಿಂದ ಒದಗಿಸಿದ್ದುದು 41.72 ಕೋಟಿ ರೂಪಾಯಿ, ಅದು ಕೇಂದ್ರದಿಂದ ಬಂದ ಹಣ. ಅದು ಫಾರ್ ಅಕೌಂಟಿಗೆ ಪರ್ಪಸ್. ಸ್ಪೆಷಲ್ ಡೆವಲಪ್ಮೆಂಟ್ ರೋಡ್ಸ್ ಎಂ.ಎಲ್.ಎ. ವರ್ಕ್ಸ್ ಎಂದು ಹೇಳಿ 40ಕೋಟಿ ರೂಪಾಯಿ. ಅಂದರೆ ನಾವು ಈಗಾಗಲೇ ಹೆಚ್ಚು ಹಣವನ್ನು ಕೊಡಬೇಕಾದರೆ ಅದಕ್ಕೆ ಮನ್ನಣೆ ಬೇಕಾಗುತ್ತದೆ. ಏಕೆಂದರೆ ಅದನ್ನು ನಾವು ಆಯವ್ಯಯದಲ್ಲಿ 40 ಕೋಟಿ ರೂಪಾಯಿಗಳನ್ನು ಒದಗಿಸಿರಲಿಲ್ಲ. ಒಬ್ಬೊಬ್ಬ ಎಂ.ಎಲ್.ಎ ಕ್ಷೇತ್ರಕ್ಕೆ ನಾನು ಇಪ್ಪತ್ತು ಲಕ್ಷ ರೂಪಾಯಿ ಪ್ರಕಾರ ಕೊಡಬೇಕು ಎಂದು ನಾವು ಯೋಜನೆ ಮಾಡಿದ ಪ್ರಕಾರ 40 ಕೋಟಿ ರೂಪಾಯಿ ಈ ಬಜೆಟ್‌ನಲ್ಲಿ ಅದನ್ನು ನಾವು ಒದಗಿಸಿಕೊಟ್ಟಿದ್ದೇವೆ. ಈ ಹಣದಲ್ಲಿ ಐದು ಲಕ್ಷ ರೂಪಾಯಿ ಮೊದಲನೆಯ ಕಂತು ಆಯಾ ಎಂ.ಎಲ್.ಎ ಕ್ಷೇತ್ರಕ್ಕೆ ಮತ್ತೊಂದು ಐದು ಲಕ್ಷ ರೂಪಾಯಿಗಳ ಆ ಕೆಲಸವನ್ನು ನಾವು ಮಂಜೂರು ಮಾಡಿಕೊಳುಹಿಸಿದ್ದೇವೆ. ಹತ್ತು ಲಕ್ಷ ರೂಪಾಯಿ ಆಯಿತು, ಇನ್ನೊಂದು ಹತ್ತು ಲಕ್ಷ ರೂಪಾಯಿಗಳನ್ನು ನಾವು ಮಾರ್ಚಿ ಒಳಗಡೆ ಬಿಡುಗಡೆ ಮಾಡುತ್ತೇವೆ. ಇದನ್ನು ನಾವು ಒದಗಿಸದೇ ಇದ್ದರೆ ಈ ಯೋಜನೆಯನ್ನು ನಾವು ಅನುಷ್ಠಾನ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ನಮಗೆ ಸ್ವಲ್ಪ ಈ ಬಗ್ಗೆ ತಡವಾಯಿತು. ಏಕೆಂದರೆ ಇರುವ ಹಣಕ್ಕಿಂತಲೂ ಹೆಚ್ಚು ಪ್ರೊವೈಡ್ ಮಾಡಬೇಕಾಗುತ್ತದೆ. ನಮ್ಮ ಕಂಟಿನ್ಜೆನ್ಸಿ ಫಂಡ್ನಲ್ಲಿ ಶಾರ್ಟೇಜ್ ಬಂದಿದ್ದರಿಂದ ಅದನ್ನು ಹೆಚ್ಚುವರಿ ಒದಗಿಸಲಿಕ್ಕೆ ಆಗಲಿಲ್ಲ. ಇದನ್ನು ತಾವು ಮಂಜೂರು ಮಾಡಿದರೆ ಒಳ್ಳೆಯದು. ಇದನ್ನೂ ಅಪೋಸ್ ಮಾಡಿದ್ದೀರಿ ಮಾನ್ಯ ಬೈರೇಗೌಡರೇ. ಅಪೋಸ್ ಮಾಡುವುದರಲ್ಲಿ ನೀವು ಏನೂ ದಾಕ್ಷಿಣ್ಯ ಏನೂ ಇಟ್ಟುಕೊಂಡಿಲ್ಲ.

ಶ್ರೀ ಸಿ.ಬೈರೇಗೌಡ : ಅನಿವಾರ್ಯವಾಗಿ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಐಟಂನ್ನು ಕೂಡ ಅಪೋಸ್ ಮಾಡಿದ್ದೀರಲ್ಲಾ ಎಂದು ಹೇಳಿ ವ್ಯಥೆ ಅಷ್ಟೇ ನನಗೆ. ಇಪ್ಪತ್ತು ಲಕ್ಷ ರೂಪಾಯಿ ತಮ್ಮ ಕ್ಷೇತ್ರಕ್ಕೆ ಖರ್ಚು ಮಾಡುವುದು, ಇದನ್ನು ತಾವು ಅಪೋಸ್ ಮಾಡಿಯೂ ಕೂಡ ನಾನು ಖರ್ಚು ಮಾಡುತ್ತಿದ್ದೇನೆ ಎಂದು ಹೇಳಬೇಕಾಗುತ್ತದೆ. ನೋಡಿ, ನಾನು

ಇದನ್ನು ವಿರೋಧ ಮಾಡಿದ್ದೇನೆ, ಆದರೂ ಕೂಡ ಇಪ್ಪತ್ತು ಲಕ್ಷ ರೂಪಾಯಿಗಳ ಕಾಮಗಾರಿ ಮಾಡುತ್ತೇನೆ ಎಂದು ಹೇಳಿ ಭಾಷಣವನ್ನು ಮಾಡಬೇಕಾಗುತ್ತದೆ, ನಿಮ್ಮ ಕ್ಷೇತ್ರದಲ್ಲಿ.

ಶ್ರೀ ಸಿ. ಬೈರೇಗೌಡ : ಇಪ್ಪತ್ತು ಲಕ್ಷ ರೂಪಾಯಿಗಳನ್ನು ಕೊಡುವುದು ನಿಜವೇ? ಅದನ್ನಾದರೂ ಹೇಳಿಬಿಡಿ. ರಾಜಿ ಆಗೋಣ.

ಶ್ರೀ ಎಂ. ವೀರಪ್ಪ ಮೊಯಿಲಿ : ಇನ್ನು ಅಗ್ರಿಕಲ್ಚರಲ್ ಪ್ರೊಡಕ್ಷನ್ ಲೈಸೆನ್ಸ್ ಇನ್ಸೆಂಟೀವ್ಸ್ ಸ್ಕೀಮ್ಗೆ 5 ಪರ್ಸೆಂಟ್, ಕೋ-ಅಪರೇಟಿವ್ ಲೋನ್ಸ್ ಕೊಡುವುದಕ್ಕೆ 14.50 ಲಕ್ಷ ರೂಪಾಯಿಗಳನ್ನು ನಾವು ಅದರಲ್ಲೇ ಒದಗಿಸಿದ್ದೇವೆ. ಆಮೇಲೆ Compensation loan for Toordal.

ತಮಗೆ ಗೊತ್ತಿದೆ, ಗುಲ್ಬರ್ಗ ಮತ್ತು ಸ್ವಲ್ಪ ಬೀದರ್ ಭಾಗ ಮತ್ತೆ ಕೆಲವು ಬಿಜಾಪುರ ಭಾಗದಲ್ಲಿ ಈ ತೊಗರಿ ಬೆಳೆ ಬಹಳ ನಷ್ಟವಾಯಿತು. ಅದಕ್ಕೆ ನಾವು ಐದು ಕೋಟಿ ರೂಪಾಯಿಯಲ್ಲಿ ಅದನ್ನು ಸುಧಾರಿಸಬಹುದು ಎಂದು ನಾವು ಕುಳಿತುಕೊಂಡರೆ ಹತ್ತು ಕೋಟಿ ರೂಪಾಯಿ ರೈತರಿಗೆ ಕೊಡಬೇಕಾಗಿ ಬಂತು, ರೈತರಿಗೆ ಹತ್ತು ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದನ್ನು ತಾವು ವಿರೋಧ ಮಾಡಿದ್ದೀರಿ. ಅದನ್ನೂ ಕೂಡ ನಾವು ಇದರಲ್ಲಿ ಸೇರಿಸಿದ್ದೇವೆ. ಕೆಲಾಮಿಟಿ ರಿಲೀಫ್ ಫಂಡ್ ಎಂದು ಹೇಳಿ ನಾವು ನೆರೆಹಾವಳಿಗೆ ಕೊಡಬೇಕಾದಂಥ ಹಣ, ಅದು ಹೆಚ್ಚುವರಿ. ಏಕೆಂದರೆ ತಮಗೆ ಗೊತ್ತಿದೆ, ಕೆಲಾಮಿಟಿ ರಿಲೀಫ್ ಫಂಡ್ನಲ್ಲಿ ವರ್ಷಕ್ಕೆ ಒಟ್ಟು ನಾವು ಪ್ರೊವೈಡ್ಮಾಡುವುದು ಬಜೆಟ್ನಲ್ಲಿ 27 ಕೋಟಿ. ಅದರಲ್ಲಿ ನಾವು ಆರು ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. 21 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಪ್ರತಿವರ್ಷ ಬರಬೇಕಾಗುತ್ತದೆ. ನಾವು ಆ ಲಿಮಿಟ್‌ನಲ್ಲಿ ನಿಲ್ಲಲಿಕ್ಕೆ ಆಗಲಿಲ್ಲ. ಏಕೆಂದರೆ ನಮಗೆ ಸಾಕಷ್ಟು ನೆರೆಹಾವಳಿ ಬಂತು. ಸಾಕಷ್ಟು ತೊಂದರೆಯಾಯಿತು. ತೊಗರಿ ಬೆಳೆ ಹಾಳಾಯಿತು. ಸನ್ಫ್ಲವರ್ ಬೆಳೆ ಹಾಳಾಯಿತು. ಆದರಿಂದ ಹೆಚ್ಚುವರಿ ಹಣ 12 ಕೋಟಿ ರೂಪಾಯಿ ಅದಕ್ಕೆ ಒದಗಿಸುವುದಕ್ಕೆ ಸಾಧ್ಯವಾಯಿತು. ಏಕೆಂದರೆ ಬಜೆಟ್‌ನಲ್ಲಿ ನಾವು ಪ್ರೊವೈಡ್ ಮಾಡಿದ್ದುದು ಬರೀ 27 ಕೋಟಿ. ಆದರೆ ಇನ್ನೂ ಹೆಚ್ಚುವರಿ ಹಣ ಬರಬೇಕಾದ ಕಾರಣ ಈ 12 ಕೋಟಿಯನ್ನು ಪೂರಕ ಬಜೆಟ್‌ಲ್ಲಿ ನಾವು ಒದಗಿಸಿದ್ದರಿಂದ ಅದಕ್ಕೆ ಈ ಸದನದ ಅಪ್ಪಣೆ ಪಡೆದು ಅದನ್ನು ನಾವು ರೀ ಅಪ್ರೋಪ್ರಿಯೇಟ್ ಮಾಡುತ್ತಿದ್ದೇವೆ. ಆಮೇಲೆ ಕಂಪ್ಲಿ ಮತ್ತು ಬೀದರ್ ಶುಗರ್ ಫ್ಯಾಕ್ಟರಿ ಬಗ್ಗೆ ಹೇಳುವುದಾದರೆ ಕಂಪ್ಲಿ ಶುಗರ್ ಫ್ಯಾಕ್ಟರಿ ಬಗ್ಗೆ ತಮಗೆ ಗೊತ್ತಿದೆ, ಅದೊಂದು ಸಿಕ್ ಯೂನಿಟ್ ಎಂದು.

ಅದರಲ್ಲಿ 2.07 ಕ್ರೋರ್ಸ್ ಕಂಪ್ಲಿ ಶುಗರ್ ಫ್ಯಾಕ್ಟರಿ ಮತ್ತು ಬೀದರ್ ಶುಗರ್ ಫ್ಯಾಕ್ಟರಿಗೆ ಕೊಡಬೇಕು. ಏಕೆಂದರೆ ಬೀದರ್ ಶುಗರ್ ಫ್ಯಾಕ್ಟರಿಯವರು ಮೆಷಿನರಿ ಪರ್ಚೇಸ್ ಮಾಡಿದರು. ಅದನ್ನು ಪರ್ಚೇಸ್ ಮಾಡಿದ ಮೇಲೆ ವರ್ಕಿಂಗ್ ಕ್ಯಾಪಿಟಲ್ಗೆ ಬಹಳ ತೊಂದರೆ ಆಯಿತು. ಈ ಕ್ರಷಿಂಗ್ ಸೀಸನ್ನಲ್ಲಿ ಕೆಲಸ ಮಾಡಲಿಕ್ಕೆ ಬಹಳ ತೊಂದರೆ ಆಯಿತು. ಆ ಬೇಡಿಕೆಗೆ ನಾವು ಸ್ಪಂದಿಸಿ ಅಲ್ಲಿ ಸಂಬಳ ಕೊಡಲಿಕ್ಕೆ ಅಸಾಧ್ಯ ಆದುದರಿಂದ ಅವರಿಗೆ ಮತ್ತು ಕಂಪ್ಲಿ ಶುಗರ್ ಫ್ಯಾಕ್ಟರಿಗೆ 2.07 ಕ್ರೋರಸ್ನು ಕಂಪ್ಲಿ ಮತ್ತು ಬೀದರ್ ಎರಡಕ್ಕೂ ನಾವು ಕೊಟ್ಟಿದ್ದೇವೆ. ಇದು ಒಂದನೆಯ ಕಂತಿನಲ್ಲಿ ವಿಶೇಷವಾಗಿ ಈ ಐಟಂಗಳನ್ನು, ಅಂದರೆ ಮೇಜರ್ ಐಟಂಗಳನ್ನು ಇದರಲ್ಲಿ ನಾವು ಒದಗಿಸಿದ್ದೇವೆ. ಎರಡನೆಯ ಕಂತು ಪೂರಕ ಆಯವ್ಯಯದಲ್ಲಿ ಯಾವುದನ್ನು ನಾವು ಮಂಡಿಸಿದ್ದೇವೆ ಎಂದರೆ pooling of SCP Funds. It is an accounting ajdustment. It is provided in the Budget.

ಆದರೆ ಆ ಐಟಂ ಅನ್ನು ಒಂದು ಕಡೆ ಪೂಲ್ ಮಾಡಿದ್ದರಿಂದ 47.62 ಕ್ರೋರ್ಸ್ ಆಯಿತು. ಅದನ್ನು ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ನಲ್ಲಿ ಕೊಟ್ಟಿದ್ದೇವೆ. ಕೆಲಾಮಿಟಿ ರಿಲೀಫ್ ಫಂಡ್ನಲ್ಲಿ ಎರಡನೆಯ ಕಂತಿನಲ್ಲಿ ಕೂಡ ನಾವು 25 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿ ಬಂತು. ನೆರೆ ಹಾವಳಿ ಮತ್ತು ಭೂಕಂಪ ಪೀಡಿತ ಪ್ರದೇಶಗಳಿಗೆ ಪರಿಹಾರವನ್ನು ಒದಗಿಸಲಿಕ್ಕೆ, ಪುನರ್ ವಸತಿ ಒದಗಿಸಲಿಕ್ಕೆ ಸುಮಾರು 25 ಕೋಟಿ ರೂಪಾಯಿಗಳನ್ನು ಕೊಡಬೇಕಾದ ಅವಶ್ಯಕತೆ ನಮಗೆ ಬಂತು. ಆ 25 ಕೋಟಿ ರೂಪಾಯಿಗಳನ್ನು ನಾವು ಪೂರಕ ಆಯವ್ಯಯದಲ್ಲಿ ಅಂದಾಜು ಮಾಡಿ ಕೊಟ್ಟಿದ್ದೇವೆ. ಇನ್ನು ಪ್ರಧಾನಿ ಅವರ ಪ್ರೋಗ್ರಾಮ್ ಅವರು ಅನೌನ್ಸ್ ಮಾಡಿದ್ದರು. ಎಂಪ್ಲಾಯ್ಮೆಂಟ್ ಅಶ್ಯೂರೆನ್ಸ್ ಸ್ಕೀಮ್. ಅದಕ್ಕೆ ನಾವು ಪ್ರೊವೈಡ್ ಮಾಡದಿದ್ದರೆ ಕೇಂದ್ರದಿಂದ ನಮಗೆ ಹಣ ಬರುವುದಿಲ್ಲ. ನಾವು ಇಲಾಖೆಯಲ್ಲಿ ಪ್ರೊವೈಡ್ ಮಾಡಬೇಕು. ಈ ಬಗ್ಗೆ ನಾವು 5.87 ಕೋಟಿ ರೂಪಾಯಿಗಳನ್ನು ಹಣವನ್ನು ಒದಗಿಸಿದ್ದೇವೆ. ಇನ್ನು reimbursement of extra cost to Mysugar and MSIL for Arrack Works

ನಾವು ಏಳು ಕೋಟಿ ರೂಪಾಯಿ ಒದಗಿಸಿದ್ದೇವೆ. ಏಕೆಂದರೆ ತಮಗೆ ಗೊತ್ತಿದೆ. ನಾವು ಹೈಯರ್ ರೇಟ್ ಆರ್.ಎಸ್.ಗೆ ಕೊಡಬೇಕಾಗಿ ಬಂತು. ಅದನ್ನು ಹೆಚ್ಚು ಡ್ಯೂಟಿಯಾಗಿ ವಸೂಲು ಮಾಡಿದ್ದೇವೆ. ಅದರಿಂದ ಸರ್ಕಾರಕ್ಕೆ ನಷ್ಟ ಆಗುವುದಿಲ್ಲ. ಆ ಮಟ್ಟಿಗೆ ಸರ್ಕಾರದಿಂದ ಔಟ್ ಗೋ ಆಗುತ್ತದೆ. ಅದು ಅವರಿಗೆ ಆಪರೇಷನ್ ಕಾಸ್ಟ್ ಮೆಷಿನರಿ ಮಾಡಲಿಕ್ಕೆ, ರೆಂಟಿಗೆ ಜಾಗವನ್ನು ತೆಗೆದುಕೊಳ್ಳಲಿಕ್ಕೆ ಆಪರೇಷನ್ ಕಾಸ್ಟ್ ಈಕ್ವಿಪ್ಮೆಂಟ್ಸ್ ತೆಗೆದುಕೊಳ್ಳುವುದಕ್ಕೆ ನಾವು ಸುರು ಏಳು ಕೋಟಿ ರೂಪಾಯಿ ಕೊಡಬೇಕಾದ ಅವಶ್ಯಕತೆ ಬಂತು. ಅದಕ್ಕೆ ನಾವು ಏಳು ಕೋಟಿ ರೂಪಾಯಿಯನ್ನು ಎಂಎಸ್ಐಎಲ್ ಮತ್ತು ಮೈಶುಗರ್ಗೆ ಕೊಟ್ಟಿದ್ದೇವೆ. ಏಕೆಂದರೆ ಈ ಮೈಶುಗರ್ಗೆ ನಷ್ಟ ಆಗಬಾರದಲ್ಲ. ಇಲ್ಲದಿದ್ದರೆ ಅವರು ಖರ್ಚು ಮಾಡಬೇಕಾಗುತ್ತದೆ. ಇನ್ನು ವಾಣಿವಿಲಾಸ್ ಫ್ಯಾಕ್ಟರಿ ನಮ್ಮ ಆ ಭಾಗದ ಸನ್ಮಾನ್ಯ ಏಕಾಂತಯ್ಯನವರು ಆ ಭಾಗದ ಸಚಿವರು, ಆ ಭಾಗದ ಎಂಪಿಗಳು, ಆ ಭಾಗದ ಎಂಎಲ್ಎಗಳು ಎಲ್ಲಾ, ವಾಣಿ ವಿಲಾಸ್ನಲ್ಲಿ ಸ್ವಲ್ಪ ನೀರು ಬಂದಿದೆ. ನೀರು ನಿಂತ ಕಾರಣದಿಂದ ಇನ್ನು ಒಂದೆರಡು ಮೂರು ವರ್ಷಗಳ ಕಾಲ ಪ್ರಯೋಜನ ಆಗುತ್ತದೆ ಕಬ್ಬು ಬೆಳೆಯಲಿಕ್ಕೆ ಒಂದು ಕೋಟಿ ರೂಪಾಯಿ ನಮಗೆ ಕೊಡಬೇಕೆಂದು ಹೇಳಿದರು. ಆ ಶುಗರ್ ಫ್ಯಾಕ್ಟರಿ ಇನ್ನೂ ಪ್ರಾರಂಭ ಆಗಿಲ್ಲ ಎಂದು ಕಾಣುತ್ತದೆ. ಏನಾದರೂ ಶುಗರ್ ಫ್ಯಾಕ್ಟರಿ ಚಾಲನೆ ಆಗುವುದಿದ್ದರೆ ಅದನ್ನು ನಾವು ಮಾಡೋಣ ಎಂದು ಹೇಳಿ ಒಂದು ಕೋಟಿ ರೂಪಾಯಿ ವಾಣಿ ವಿಲಾಸ್ ಶುಗರ್ ಫ್ಯಾಕ್ಟರಿಗೆ ಪೂರಕ ಅಂದಾಜಿನಲ್ಲಿ ಒದಗಿಸಲಾಗಿದೆ. ನಮ್ಮ ಒಟ್ಟು ಗಾತ್ರದ ಈ ಒಂದು ಆಯವ್ಯಯವನ್ನು ನೋಡಿದರೆ, ಯೋಜನೆ ಮತ್ತು ಯೋಜನೇತರ ಖರ್ಚುನೋಡಿದರೆ It is 2.48% of the original budget. ನಾವು ಎಲ್ಲಾ ವರ್ಷಗಳಿಗೂ ಸಹ ಪೂರಕ ಬೇಡಿಕೆಗಳನ್ನು ಈ ವರ್ಷದ ಪೂರಕ ಬೇಡಿಕೆಗಳಿಗೆ ಹೋಲಿಸಿದರೆ 2.48 ಪರ್ಸೆಂಟ್ ಏನು ಪೂರಕ ಬಜೆಟ್ಟನ್ನು ಸದನಕ್ಕೆ ಮಂಡನೆ ಮಾಡಿದ್ದೇವೆ. ಇದು ಅತ್ಯಲ್ಪ. ಆ ಪ್ರಮಾಣದಲ್ಲಿ ಅಷ್ಟೊಂದು ಗಾತ್ರದ ಬೇಡಿಕೆ ಎಂದು ಖಂಡಿತವಾಗಿ ಹೇಳುವುದಕ್ಕೆ ಸಾಧ್ಯ ಆಗುವುದಿಲ್ಲ. ಮಾನ್ಯ ಬೈರೇಗೌಡರು ಎತ್ತಿದಂತಹ ಪ್ರಶ್ನೆಗಳಿಗೆ ನಾವು ಹೇಳುವುದು ಇದ್ದರೆ "ಕೋಲಾರದ ಕೆಲವು ಛಾರ್ಜಸ್ ನೀವು ವೀರಾವೇಶದಿಂದ ಮಾತನಾಡಿ ಬಂದು ಬಿಟ್ಟಿರಿ, ನೀವು ಏನೂ ಮಾಡಿಲ್ಲ ಸುಮ್ಮನೆ ಇದ್ದೀರಿ" ಎಂದು ಹೇಳಿದಿರಿ. ತಮಗೆ ಮಾಹಿತಿ ಇಲ್ಲದ ಕಾರಣದಿಂದ ನನ್ನ ಮೇಲೆ ತಾವು ಈ ರೀತಿ ಹೇಳುವುದು ಸಾಧ್ಯ. ಆದರೆ ನಾನಂತೂ ಸುಮ್ಮನೇ ಇರಲಿಲ್ಲ. ಅಲ್ಲಿಂದ ನಾನು ಬಂದ ಮೇಲೆ ನಾವು ಡಿಪಾರ್ಟ್ಮೆಂಟಲ್ ಎನ್ಕ್ವೈರಿ ಮುಗಿಸಿದ ಮೇಲೆ, ಅದನ್ನು ಲೋಕಾಯುಕ್ತಕ್ಕೆ ಒಪ್ಪಿಸಿದ್ದೇವೆ, ನನ್ನ ಹತ್ತಿರ ಡೀಟೇಲ್ಸ್ ಇಲ್ಲ. We have entrusted this case to Lokayukta. We have not remianed

quiet about these allegations. ಅಲಿಗೇಷನ್ಸ್ ಬಗ್ಗೆ ಡಿಪಾರ್ಟ್ಮೆಂಟ್ಲ್ ಎನ್ಕ್ವೈರಿ ಮಾಡಿದ ಮೇಲೆ ಅಲ್ಲಿ ಪ್ರೈಮಾ ಫೇಸಿ ಕೇಸ್ ಇದೆ ಎಂದು ಕಂಡು ಬಂದ ಮೇಲೆ, ತಮಗೆ ಗೊತ್ತಿದೆ ಡಿಪಾರ್ಟ್ಮೆಂಟಲ್ ಎನ್ಕ್ವೈರಿ ಮಾಡದೇ ನೇರವಾಗಿ ಲೋಕಾಯುಕ್ತಕ್ಕೆ ಕೊಡುವುದಕ್ಕೆ ಬರುವುದಿಲ್ಲ. ಕೊಡುವುದೂ ಸರಿ ಅಲ್ಲ. ಪ್ರೈಮಾ ಫೇಸಿ ಕೇಸ್ ಇದೆ ಎಂದು ಕಂಡು ಬಂದ ಮೇಲೆ ನಾವು ಲೋಕಾಯುಕ್ತಕ್ಕೆ ಒಪ್ಪಿಸಿದ್ದೇವೆ. ಲೋಕಾಯುಕ್ತದಲ್ಲಿ ಆ ವಿಚಾರಗಳು ಇದೆ. ಆದ್ದರಿಂದ ಅದರ ಬಗ್ಗೆ ನಾನು ಕಾಮೆಂಟ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈ ಸದನದಲ್ಲಿ ಚರ್ಚೆ ಆಗಿ ಲೋಕಾಯುಕ್ತಕ್ಕೆ ಹೋಗಿದೆ. ಅದು ಹಿಯರಿಂಗ್ ಆಗಿ ಮೇಲೆ ಡಿವಿಜನ್‌ಗೆ ಸಂಬಂಧ ಪಟ್ಟಿರತಕ್ಕ ವಿಚಾರ. ನಾನು ಹೇಳಿರತಕ್ಕದ್ದು ಸಿರಿಕಲ್ಚರ್ ವಿಚಾರ. ಅದರ ಬಗ್ಗೆ ತಾವು ದಯವಿಟ್ಟು ನೋಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಬಾಕಿ ಉಳಿದಿರತಕ್ಕ ವಿಚಾರಗಳು ಏನಾದರೂ ಬಿಟ್ಟಿದ್ದರೆ ಅದನ್ನೂ ಕೂಡ ಪರಿಶೀಲನೆ ಮಾಡಿ ಆಕ್ಷನ್ ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ನಾನು ತಮಗೆ ಒಂದು ಪತ್ರ ಬರೆಯುತ್ತೇನೆ. ಅದು ಏನಾಗಿದೆ ಎನ್ನುವ ಬಗ್ಗೆ ಫಾಲೋಅಪ್ ಮಾಡಿ ಉತ್ತರವನ್ನು ಕೊಡುವುದರಲ್ಲಿ ನಮ್ಮ ಕಛೇರಿಯಿಂದ ಕೆಲವು ಸಲ ಲೋಪವಾಗುತ್ತದೆ. ಆದರೆ ಇದರ ಬಗ್ಗೆ ತಮಗೆ ವಿವರಗಳನ್ನು ಖಂಡಿತವಾಗಿ ಸಪರೇಟ್ ಆಗಿ ಒದಗಿಸುತ್ತೇನೆ. ಹಿರಿಯ ಸದಸ್ಯರಾದಂಥ ಮಾನ್ಯ ಏಕಾಂತಯ್ಯನವರು ಕಾಕಂಬಿಯ ಬಗ್ಗೆ ಏನು ಪ್ರಶ್ನೆಯನ್ನು ಎತ್ತಿದ್ದರು. ಅದರ ಬಗ್ಗೆ ಮೊನ್ನೆ ನಾನೇ ಹೇಳಿದ್ದೇನೆ. ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ಅದರಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಅಪಾರವಾದಂಥ ನಷ್ಟವಾಗುತ್ತದೆ. ಆದರೆ ರೈತರಿಗೆ ಹೆಚ್ಚು ಕೇನ್ ಬೆಲೆಯನ್ನು ಕೊಡಬೇಕು ಎನ್ನತಕ್ಕ ದೃಷ್ಟಿಯಲ್ಲಿ ಅದರ ಬಗ್ಗೆ ವ್ಯಾಪಕವಾಗಿ ನೋಡಿದರೆ, ನಾನು ಹೇಳಿದ್ದ ಒಂದು ಮಾತು ನಿಜ, ರೈತರಿಗೆ ಅದರ ಲಾಭ ಹೆಚ್ಚು ಸಿಗಬೇಕಾಗಿದ್ದರೆ ಅವರಿಗೆ ನೇರವಾಗಿ ಬೆಲೆ ದೊರಕಬೇಕಾಗುತ್ತದೆ. ಆ ರೀತಿ ಸಿಗುವ ಹಾಗಿದ್ದರೆ ನಮ್ಮ ರಾಜ್ಯಮಟ್ಟದಲ್ಲಿ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ. ತಮಗೆ ಹೇಳುವಾಗಿದ್ದರೆ, ಕೇಂದ್ರದಲ್ಲಿ ಇದರಿಂದ ರಾಜ್ಯಕ್ಕೆ ಎಷ್ಟು ನಷ್ಟವಾಗಿದೆ ಅದನ್ನು ತುಂಬಲು ಏನು ಮಾಡುವುದಕ್ಕೆ ಸಾಧ್ಯವಿದೆ, ಎನ್ನುವುದನ್ನು ಪರಿಶೀಲನೆ ಮಾಡಲು ರಾಷ್ಟ್ರಮಟ್ಟದ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಅದಕ್ಕೆ ನನ್ನನ್ನೇ ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಆ ಸಮಿತಿಯನ್ನು, ಸಂಬಂಧಪಟ್ಟ ಕೆಮಿಕಲ್ ಅಂಡ್ ಫರ್ಟಿಲೈಜರ್ ಮಿನಿಸ್ಟರಿಯವರು ಮಾಡಿದ್ದಾರೆ. 18ನೇ ತಾರೀಖು ಇದರ ಬಗ್ಗೆ ದೆಹಲಿಯಲ್ಲಿ ಸಭೆ ನಡೆಯುತ್ತಿದೆ. ಅಲ್ಲಿ ರಾಜ್ಯದ ಬೊಕ್ಕಸಕ್ಕೆ ಇದರಿಂದ ಆಗತಕ್ಕ ನಷ್ಟವನ್ನು ಯಾವ ರೀತಿಯಲ್ಲಿ ತುಂಬಿಸಲು ಸಾಧ್ಯವಿದೆ ಎನ್ನತಕ್ಕ ತಂತ್ರವನ್ನು ಉಪಯೋಗ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಪರಿಶೀಲನೆ ನಡೆಯುತ್ತದೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಅಲ್ಲಿ ಬೇರೆ ಬೇರೆ ರಾಜ್ಯಗಳ ಎಕ್ಸೈಜ್ ಮಂತ್ರಿಗಳು ಸಹ ಇರುವುದರಿಂದ ಇದರ ಬಗ್ಗೆ ಚರ್ಚೆ ಮಾಡುವುದರಿಂದ, ಮತ್ತು ಇದರ ಬಗ್ಗೆ ಅತೀ ಬೇಗ ನಿರ್ಣಯವನ್ನು ಕೊಡಬೇಕೆಂದು ನಮ್ಮೆಲ್ಲರ ಆಸೆ ಇರುವುದರಿಂದ ಇದರ ಬಗ್ಗೆ ನಾನು ಹೆಚ್ಚು ಮಾತುಗಳನ್ನು ವಿಸ್ತಾರವಾಗಿ ಬೆಳೆಸಲು ಹೋಗುವುದಿಲ್ಲ.

ಅನಂತರ ಮನೆಗಳ ಬಗ್ಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನತಕ್ಕ ಪ್ರಸ್ತಾವ ಇಲ್ಲಿ ಬಂತು. ಏಕೆಂದರೆ ಮೊಯಿಲಿಯವರು ಇಲ್ಲಿಯವರೆಗೆ ಏನು ಭಾಷಣಮಾಡಿದ್ದೀರಿ? ಏನೆಲ್ಲ ಹೇಳಿದ್ದೀರಿ? ಇದರ ಬಗ್ಗೆ ಪಟ್ಟಿಯನ್ನು ಕೊಡಿ ಎಂದು ಹೇಳಿದ್ದಾರೆ. ಅದರ ಪಟ್ಟಿಯನ್ನು ನಾನು ಆಗಾಗ್ಗೆ ಕೊಡುತ್ತಲೇ ಇದ್ದೇನೆ. ಮುಂದೆ ಮಾಡುವುದನ್ನು ಅನಂತರ ನೋಡೋಣ. ನಾನು ಒಂದು ಕೆಲಸ ಮಾಡುತ್ತೇನೆ. ನನ್ನ ನೂರು ದಿನಗಳ ಕಾರ್ಯಕ್ರಮದ್ದು, ಫಿಜಿಕಲ್ ಪರ್ಫಾಮೆನ್ಸ್ ಅದನ್ನು ಕೊಟ್ಟಿದ್ದೇನೆ. ಒಂದು

ವರ್ಷ ಆದ ಮೇಲೆ ಏನು ಫಿಜಿಕಲ್ ಪರ್ಫಾಮೆನ್ಸ್, as compared to previous years, Mobilisation of resources of all sectors. ಎಲ್ಲಾ ಇಲಾಖೆಗಳಲ್ಲಿ ಕೂಡ ನಾನು ಕೊಟ್ಟಿದ್ದೇನೆ. ನನ್ನದೆಲ್ಲ ಟ್ರಾನ್ಸ್‌ಫರೆಂಟ್ ಸರ್ಕಾರ. ಆದ್ದರಿಂದ ಅವುಗಳ ಬಗ್ಗೆ ಎಲ್ಲವನ್ನು ಪಟ್ಟಿಮಾಡಿ ಕೊಟ್ಟಿದ್ದೇನೆ. ಆದರೆ ತಮ್ಮ ಬಳಿ ಅದರ ಪ್ರತಿ ಇಲ್ಲದಿದ್ದರೆ ಆ ಎಲ್ಲಾ ವರದಿಯನ್ನು ಒಟ್ಟು ಮಾಡಿ ಕೊಡುತ್ತೇನೆ. ತಮಗೆ ಹಂಚುತ್ತೇನೆ. ಅನಂತರ ಅದನ್ನು ದಯಮಾಡಿ ನೋಡಿ ಅದರ ಬಗ್ಗೆ ಕಾಮೆಂಟ್ ಮಾಡಿ. ಆಗ ನಮಗೂ ಸ್ವಲ್ಪ ಅನುಭವಕ್ಕೆ ಬರುತ್ತದೆ. ನಾವು ಸಹ ಅದರ ಬಗ್ಗೆ ತಿಳಿದುಕೊಂಡು ವಿಚಾರ ಮಾಡಿ ಉತ್ತರ ಕೊಡಲು ಆಗುತ್ತದೆ. ತಮಗೆ ಆಶ್ರಯ ಮತ್ತು ಡಾ|| ಅಂಬೇಡ್ಕರ್ ಮನೆಗಳ ಬಗ್ಗೆ ಒಂದೇ ಬಾಬ್ತಿನಲ್ಲಿ ಹೇಳುತ್ತೇನೆ. ಡಾ| ಅಂಬೇಡ್ಕರ್ ಮನೆಯ ವಿಚಾರದಲ್ಲಿ ಕಾರ್ಯಕ್ರಮ ಬಂದು ಮೂರು ವರ್ಷಗಳಾಯಿತು. ಡಾ| ಅಂಬೇಡ್ಕರ್‌ರವರ ಜನ್ಮದಿನಾಚರಣೆಯ ಹೆಸರಿನಲ್ಲಿ ಮನೆಗಳನ್ನು ಕಟ್ಟಿಸಿಕೊಡುವ ಕಾರ್ಯಕ್ರಮ ಬಂದು ಮೂರು ವರ್ಷಗಳಾಗಿದೆ. ನಾವು ಮೂರು ವರ್ಷಗಳಿಂದಲೂ ಭಾಷಣ ಮಾಡುತ್ತಲೇ ಬಂದಿದ್ದೇವೆ. ಆದರೆ ಆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿದುದು 1993-94ರಲ್ಲಿ. ನಾವು ಅದನ್ನು ಅನುಷ್ಠಾನ ಮಾಡಿದ್ದಕ್ಕೆ ಒಂದು ಸಲ 31.20 ಕೋಟಿ ಖರ್ಚು ಮಾಡಿದ್ದೇವೆ. ಅನಂತರ ಅದರಲ್ಲಿ ಒಳ್ಳೆಯ ಅಭಿವೃದ್ಧಿ ಕಂಡುಬಂದಿದ್ದರಿಂದ ಪುನಃ 12ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ. ಅನಂತರ ಡಿಪಾರ್ಟ್‌ಮೆಂಟಿನ ಬಜೆಟಿನಿಂದ 5 ಕೋಟಿ ರೂಪಾಯಿಗಳನ್ನು ಬಿಡುಗಡೆಮಾಡಿದ್ದೇವೆ. ಅಂದರೆ ಒಟ್ಟು 48 ಕೋಟಿ ರೂಪಾಯಿಗಳನ್ನು ಆ ಒಂದು ಕಾರ್ಯಕ್ರಮದ ಅನ್ವಯ ಬಿಡುಗಡೆ ಮಾಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಲೆನಾಡು ಪ್ರದೇಶದಲ್ಲಿ ಅಂಬೇಡ್ಕರ್ ಅಥವಾ ಆಶ್ರಯ ಈ ಎರಡೂ ರೀತಿಯ ಕಾರ್ಯಕ್ರಮದ ಮನೆಗಳಿಗೆ 1991ರಲ್ಲಿ ಬಂದ ಸುತ್ತೋಲೆಯ ಪ್ರಕಾರ ಅರಣ್ಯ ಇಲಾಖೆಗೆ ಸೇರಿದ ಜಾಗವಾದರು ಸಹ ಅಲ್ಲಿ ಸೈಟನ್ನು ಕೊಟ್ಟು ಮನೆಯನ್ನು ಮಾಡಿ ಎಂದು ಹೇಳಿದ್ದರು. ಅನಂತರ ಅದನ್ನು ವಿಥ್‌ಡ್ರಾ ಮಾಡಿದರು. ಈ ಅಂಬೇಡ್ಕರ್ ಕಾರ್ಯಕ್ರಮದ ಅಡಿಯಲ್ಲಿ ಆಶ್ರಯ ಯೋಜನೆಯ ಅಡಿಯಲ್ಲಿ ಯಾರಿಗೆ ಸೈಟುಗಳನ್ನು ಕೊಟ್ಟಿದ್ದಾರೋ ಅವರನ್ನು ಮಾತ್ರ ಪರಿಗಣನೆ ಮಾಡಬೇಕು, ಆ ರೀತಿ ಸೈಟು ಇಲ್ಲದಿದ್ದರೆ ಅಂಬೇಡ್ಕರ್ ಮನೆಯನ್ನು ಕೊಡಲು ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಅದನ್ನು ನಾವು ಸ್ವಲ್ಪ ಸಡಿಲಿಸಲು ಪ್ರಯತ್ನ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಅದರ ಬಗ್ಗೆ ವಿಚಾರ ಮಾಡೋಣ. ಅದರ ಬಗ್ಗೆ ನಿನ್ನೆ ಕ್ಯಾಬಿನೇಟ್ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದೇನೆಂದರೆ ಸೇಂದಿವನ, ಕುಮ್ಕಿ, ಗುಂಡುತೋಪು ಮುಂತಾದ ಜಾಗಗಳೇನು ಇತ್ತು ಅಲ್ಲೂ ಸಹ ಮನೆಗಳನ್ನು ಕಟ್ಟುವ ಉದ್ದೇಶಕ್ಕೆ ಸೈಟನ್ನು ಕೊಡಬಹುದೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅರ್ಧ ಮನೆಯಾದ ಮೇಲೆ ಈಗ ಸೈಟಿಗೆ ಇನ್ಸಿಸ್ಟ್ ಮಾಡುತ್ತಿದ್ದಾರೆ. ಮನೆಯನ್ನು ಕೊಟ್ಟು ಬಿಟ್ಟಿದ್ದೀರಿ ಈಗ ಸೈಟಿಗೆ ಇನ್ಸಿಸ್ಟ್ ಮಾಡುತ್ತಿದ್ದಾರೆ. 1991 ಆಜ್ಞೆಯ ಪ್ರಕಾರ, ಅಂಬೇಡ್ಕರ್ ಮನೆಗಳಿಗೆ ಸೈಟ್ಸನ್ನು ಇನ್ಸಿಸ್ಟ್ ಮಾಡಿದ್ದರಿಂದ ಅನೇಕವುಗಳು ಉಳಿದು ಬಿಟ್ಟಿದೆ. ಶಿವಮೊಗ್ಗ ಜಿಲ್ಲೆಯಲ್ಲಂತೂ ಈ ರೀತಿ ಬಹಳವಾಗಿ ಉಳಿದುಬಿಟ್ಟಿದೆ. ಆಶ್ರಯ ಸೈಟ್ ಇದ್ದರೆ ಮಾತ್ರ ಕೊಡುತ್ತೇವೆ, ಅದು ಇಲ್ಲದಿದ್ದರೆ ಕೊಡುವುದಿಲ್ಲವೆಂದು ಹೇಳಿಬಿಟ್ಟರೆ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಡಾ: ಅಂಬೇಡ್ಕರ್ ಜಯಂತಿಯ ಮನೆಗಳ ಕಾರ್ಯಕ್ರಮದಲ್ಲಿ ನೀವು ಆಶ್ರಯ ಯೋಜನೆಯಲ್ಲಿನ ಸೈಟ್‌ನಲ್ಲಿಯೇ ಮಾಡಬೇಕೆಂದಿಲ್ಲ.

ನಿಮಗೆ ಬೇರೆ ಯಾವುದಾದರೂ ಸೈಟು ಇದ್ದರೆ ಮನೆ ಕಟ್ಟಿಕೊಳ್ಳಬಹುದು. ಅಲ್ಲಿ ಏನಾದರೂ ಅಡೆತಡೆ ಇದ್ದರೆ ಅದನ್ನು ನಿವಾರಿಸಲು ಬೇರೆಯಾದ ಸುತ್ತೋಲೆಯನ್ನು ಇಷ್ಯೂ ಮಾಡುತ್ತೇವೆ. ಇಲ್ಲದಿದ್ದರೆ ಆ ಕಾರ್ಯಕ್ರಮ ನಿಂತುಹೋಗಬಹುದು. ಇದಕ್ಕಾಗಿ ಬರೀ ಒಂದು ಉದಾಹರಣೆಯನ್ನು ಹೇಳಿದ್ದೇನೆ. ಮಾನ್ಯ ಬೈರೇಗೌಡರು ಇದರ ಬಗ್ಗೆ ವಿಷಯವನ್ನು ಎತ್ತಿದ ಮೇಲೆ ಸ್ವಲ್ಪವಾದರೂ ಹೇಳಬೇಕಲ್ಲ ಅದಕ್ಕಾಗಿ ಹೇಳುತ್ತಿದ್ದೇನೆ.

ಈ ಮನೆಗಳ ಕಾರ್ಯಕ್ರಮದಲ್ಲಿ, ಅಂದರೆ ಅಂಬೇಡ್ಕರ್ ಮನೆಗಳ ಕಾರ್ಯಕ್ರಮದಲ್ಲಿ 65 ಕೋಟಿ ರೂಪಾಯಿ, ಆಶ್ರಯ ಯೋಜನೆಯಲ್ಲಿ 48 ಕೋಟಿ ರೂಪಾಯಿ ಒಟ್ಟು ಸುಮಾರು 95ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆಶ್ರಯ ಯೋಜನೆಯ ಕಾರ್ಯಕ್ರಮದಲ್ಲಿ ಹಿಂದಿನ ವರ್ಷದ ಮಾಹಿತಿಯನ್ನು ತೆಗೆದುಕೊಳ್ಳುವುದಾದರೆ In Ashraya not even Rs. 20 crores was released Not even 600 houses were ready. This is on record. To-day as on March, our hope is that about 8000 - houses will be ready. My hope is one lakh houses. However, atleast 80,000 houses will be ready.

ಮತ್ತು ಮನೆಗಳನ್ನು ಕಟ್ಟುವ ಬಗ್ಗೆ ಮುಂದಿನ ಕಾರ್ಯಕ್ರಮವನ್ನು ಬರುವ ಬಜೆಟಿನಲ್ಲಿ ಪ್ರಕಟಣೆ ಮಾಡುತ್ತೇವೆ. ಈಗಲೆ ಪ್ರಕಟಣೆ ಮಾಡಿದರೆ ಅದು ಸ್ವಾರಸ್ಯವಿರುವುದಿಲ್ಲ.

ಶ್ರೀ ಎ. ನಾರಾಯಣಸ್ವಾಮಿ (ಬೇತಮಂಗಲ) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಮುಖ್ಯಮಂತ್ರಿಗಳು 500 ಮನೆಗಳನ್ನು ಕಟ್ಟುವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಆದರೆ ಇದುವರೆಗೆ ಮನೆಗಳನ್ನು ಕಟ್ಟುವ ಆದೇಶ ಬಂದಿರತಕ್ಕದ್ದು ಒಂದು ಸಲ 7 ಮನೆಗಳು ಮತ್ತೊಂದು ಸಲ, ಅಂದರೆ ಹಿಂದಿನ ತಿಂಗಳು 48 ಮನೆಗಳನ್ನು ಕಟ್ಟಲು ಆದೇಶ ಬಂದಿದೆ. ಒಟ್ಟು 55 ಮನೆಗಳಿಗೆ ಮಾತ್ರ ಬಂದಿದೆ. 500 ಮನೆಗಳಲ್ಲಿ ಕೇವಲ 55 ಮನೆಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಇದನ್ನು ಕಟ್ಟಬೇಕೆಂದು ಕಾರ್ಯಕ್ರಮ ಬಂದಿಲ್ಲ. ನಾನು ಅಲ್ಲಿಗೆ ಅಧ್ಯಕ್ಷನಾಗಿದ್ದರು ಸಹ ಮನೆಯನ್ನು ಕಟ್ಟಲು, ಹಣವನ್ನು ಬಿಡುಗಡೆ ಮಾಡಲು ಅಧ್ಯಕ್ಷನಲ್ಲ; ನಾನು ಕೇವಲ ಸೈಟುಗಳನ್ನು ಕೊಡುವುದಕ್ಕೆ ಅಧ್ಯಕ್ಷ. ನನ್ನ ವಾದವೇನೆಂದರೆ ನನ್ನ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಲ್ಲಿ ಒಂದು ಸಾರಿ 7 ಮತ್ತೊಂದು ಸಾರಿ 45 ಒಟ್ಟು 52 ಮನೆಗಳನ್ನು ಕಟ್ಟಲು ಹಣ ಬಂದಿದೆ. ಉಳಿದುದಕ್ಕೆ ಹಣ ಬಿಡುಗಡೆಯಾಗಿಲ್ಲ. ಮುಖ್ಯಮಂತ್ರಿಗಳಲ್ಲಿ ಕೋರಿಕೊಳ್ಳುವುದೇನೆಂದರೆ ನನ್ನ ಕ್ಷೇತ್ರದ ಬಗ್ಗೆ ನಿಮ್ಮ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿ. 52 ಮನೆಗಳನ್ನು ಬಿಟ್ಟರೆ ಇದುವರೆಗೆ ಯಾವ ಹಣವು ಬಿಡುಗಡೆಯಾಗಿಲ್ಲ. ದಯಮಾಡಿ ನನ್ನ ಮನವಿಯನ್ನು ತಾವು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಒಂದು ಮಾತನ್ನು ಒಪ್ಪಿಕೊಳ್ಳುತ್ತಾರೆ. ಅದು ಏನೆಂದರೆ ಅವರು ಮುಖ್ಯಮಂತ್ರಿಗಳಾಗುವುದಕ್ಕಿಂತ ಮುಂಚೆ 2 ಲಕ್ಷದ 35 ಸಾವಿರ ಮನೆಗಳನ್ನು ಕಟ್ಟುವ ಕಾರ್ಯಕ್ರಮವಿತ್ತು. ಅದು ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, 1993-94ನೇ ಬಡ್ಜೆಟ್ ಭಾಷಣದಲ್ಲಿ ತಾವೇ ಒಪ್ಪಿಕೊಂಡಿದ್ದೀರಿ. ಆ ಸಮಯದಲ್ಲಿ ತಾವು ಏನು ಹೇಳಿದ್ದೀರಿ ಎಂದರೆ ಪುನಃ ರೀವೈಜ್ ಟಾರ್ಗೇಟ್ ಮಾಡಿದ್ದೇನೆ. 160.50 ಕೋಟಿ ಎಂದು ಕೊಟ್ಟಿದ್ದೀರಿ. 1993-94ರ ಬಡ್ಜೆಟ್ ಸ್ಪೀಚ್‌ನಲ್ಲಿ ಒಂದು ಲಕ್ಷದ 6 ಸಾವಿರ ಮನೆಗಳನ್ನು ಜೂನ್ 93ರಲ್ಲಿ ಮುಗಿಸುತ್ತೇವೆ ಮತ್ತು ಮಾರ್ಚಿ 1994ರ ಒಳಗೆ ಮತ್ತೊಂದು ಲಕ್ಷ ಎಂದರೆ your commitment to the poor people of the State was that by March end you were to construct 2,06,000 houses and the budget provision was 160 crores.

ಇವತ್ತು ತಾವೇ ಒಪ್ಪಿಕೊಳ್ಳುತ್ತಿದ್ದೀರಿ. 85 ಸಾವಿರ ಮನೆಗಳು ಮತ್ತು 90 ಕೋಟಿ ರೂ.ಗಳನ್ನು ಆಶ್ರಯ ಅಂಬೇಡ್ಕರ್ ಯೋಜನೆಯಲ್ಲಿ ಇಟ್ಟಿದ್ದೆ ಅಂತ ಹೇಳುತ್ತಾ You have yourself admitted that you have failed in implementing this programme.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ತಮಗೆ ಗೊತ್ತಿದೆ. ಎಗಜಮ್ಸ್‌ನ್ ಯಾವುದು ಮಾಡಿದ್ದೇವೆ ಎಂದು ಹೇಳಿದರೆ ಎಲ್ಲಾ ಜಿಲ್ಲೆಗಳಿಗೂ ಕಂಟ್ರಾಕ್ಟ್‌ದಾರರ ಕೈಯಲ್ಲಿ ಇತ್ತು. At a time we framed the budget speach ಕಂಟ್ರಾಕ್ಟ್‌ದಾರರು ಏನು ಮಾಡಿದರು ಅನೇಕ ಕಡೆಗಳಲ್ಲಿ ಕೋರ್ಟಿಗೆ ಹೋದರು. They went to the court. ಕೋರ್ಟಿನಲ್ಲಿ ಸ್ಟೇತೆಗೆದುಕೊಂಡರು. ನಾವು ನೇರವಾಗಿ ಕಂಟ್ರಾಕ್ಟರವರ ಮುಖಾಂತರ ಮಾಡುವುದಕ್ಕೆ ಆಗಲಿಲ್ಲ. ನಾವು ನೇರವಾಗಿ we ran into the problem for several months.

ಹೌಸಿಂಗ್ ಪ್ರೋಗ್ರಾಂ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಆಮೇಲೆ ಒಂದೊಂದೇ ಸ್ಟೇ ವೆಕೇಟ್ ಆಯಿತು. ಇನ್ನು ಕೆಲವು ಮನೆಗಳು ಹೌಸಿಂಗ್‌ಬೋರ್ಡ್ನಲ್ಲಿ ಉಳಿದಿವೆ.

ಒಬ್ಬ ಮಾನ್ಯ ಸದಸ್ಯರು : ಅದನ್ನು ತೆಗೆದುಕೊಂಡುಬಿಡಿ.

Sri M. Veerappa Moily : That is what we are planning it now.

ಅದನ್ನು ಮಾಡುತ್ತೇವೆ, ಆದರೆ ಈ ಸಮಸ್ಯೆ ಬಂತು. ಇಲ್ಲದಿದ್ದರೆ ನಮ್ಮ ಯೋಜನೆ ಏನು ಇತ್ತು ಹೇಳಿದರೆ, The Housing Board gave me a projection that they will complete about a lakh of houses but it never happened because that was a wrong projection. ಆಮೇಲೆ ನೇರವಾಗಿ ಡೆಪ್ಯೂಟಿ ಕಮೀಷನರ್ ಗೆ ಹಣ ಕೊಟ್ಟು ವರು beneficiary ಮುಖಾಂತರ ಮನೆಗಳನ್ನು ಕಟ್ಟುವುದು ಅದು ಒಳ್ಳೆಯ ಪ್ರಯೋಗವಾಯಿತು. That is good. That is what we have to do it. ಸನ್ಮಾನ್ಯ ಶಾಸಕರಾದ ನಾರಾಯಣಸ್ವಾಮಿ ಅವರು ಹೇಳಿದ ಪರಿಸ್ಥಿತಿ ಈ ರೀತಿಯದಿರಬಹುದು. ಹೌಸಿಂಗ್‌ಬೋರ್ಡ್ಗೆ ಕೊಟ್ಟಂತಹ ಮನೆಗಳು ಇರಬಹುದು. ಹೌಸಿಂಗ್ ಬೋರ್ಡ್ ನವರು ಕೊಟ್ಟಂತಹ ಮನೆಗಳ ಬಗ್ಗೆ ಕಂಟ್ರಾಕ್ಟ್‌ದಾರು ಕೋರ್ಟ್‌ಗೆ ಹೋಗಿ ವೆಕೇಟ್ ಆದಮೇಲೆ ಕೂಡ Iam told, the Housing Board has not started the construction.

ಬಹುಶಃ ಕೋಲಾರದ ಪರಿಸ್ಥಿತಿಯು ಇದೇ ಇರಬಹುದು.

ಶ್ರೀ ಸಿ.ಬೈರೇಗೌಡ : ಪ್ರತಿಕ್ಷೇತ್ರದಲ್ಲೂ ಹೌಸಿಂಗ್ ಬೋರ್ಡ್‌ಗೆ ಕೊಟ್ಟಿದ್ದೀರಿ. ಒಂದೊಂದು ಹಳ್ಳಿಗಳಲ್ಲೂ ಕೊಟ್ಟಿದ್ದಾರೆ ಪ್ರತಿಯೊಂದು ಹಳ್ಳಿಗಳಲ್ಲಿ ಪೂರ್ತಿಯಾಗಿಲ್ಲ. ಅಂದರೆ ಅದು ಹೌಸಿಂಗ್ ಬೋರ್ಡ್‌ಗೆ ಹೋಗಿದೆ. ಪೂರ್ತಿಯಾಗಿರುವುದನ್ನು ತೆಗೆದುಕೊಂಡು ಜಿಲ್ಲಾಧಿಕಾರಿಗಳಿಗೆ ಕೊಡುವಂತಹ ವ್ಯವಸ್ಥೆಯನ್ನು ದಯವಿಟ್ಟು ಮಾಡಿ.

ಶ್ರೀ ಎಂ.ವೀರಪ್ಪಮೊಯಿಲಿ : ಈ ಸಲಹೆ ಸರಿಯಾಗಿದೆ. ನಾವು ಏನು ಮಾಡಿದ್ದೇವೆ. ನಮಗೆ we again got a wrong report.

ಎಲ್ಲೆಲ್ಲಿ ಕನ್‌ಸ್ಟ್ರಕ್ಷನ್ ಪ್ರಾರಂಭ ಮಾಡಲಿಲ್ಲ. ಅದನ್ನು ಟೇಕ್ ಓವರ್ ಮಾಡಿ ಎಂದು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಆಗ ಅವರು ಹೇಳಿದರು ಇಲ್ಲ, ಇಷ್ಟು ಮನೆಗಳನ್ನು already we have taken up ಎಂದು ಹೇಳಿದ ಮೇಲೆ ನಮಗೆ ಲೆಕ್ಕ ತಪ್ಪಿಹೋಯಿತೆ ಹೊರತು ಬೇರೆ ಏನು ಇಲ್ಲ.

ತಾವು ಕೊಟ್ಟ ಸೂಚನೆ ಚೆನ್ನಾಗಿದೆ. ಆ ಸೂಚನೆಯ ವಿಚಾರದಲ್ಲಿ ನಾವು ಪ್ರತ್ಯೇಕವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ಜಿಲ್ಲಾ ಶಾಸಕರು ಈ ಸಮಸ್ಯೆಯನ್ನು ತಮ್ಮ ಮುಂದಿಟ್ಟಾಗ ತಾವು ಆಗ ಏನು ಹೇಳಿದ್ದೀರಿ. ಹೊಸದಾಗಿ sanction ಕೊಟ್ಟಿದ್ದೇವೆ. ಅದನ್ನು ಕಂಟ್ರಾಕ್ಟ್‌ದಾರರು ಸ್ಟೇ ಮಾಡಿರುವುದರಿಂದ ಹೊಸದಾಗಿ sanctionಮತ್ತೆ ಕೊಟ್ಟು ಅದರ ಪ್ರಕಾರ ಡಿ.ಸಿ. ಅವರ ಮುಖಾಂತರ ಮಾಡಿಕೊಡುತ್ತೇವೆ. ಅಂತ ಆವಾಗ ತಾವು ಆಶ್ವಾಸನೆ ಕೊಟ್ಟಿದ್ದಿರಿ.

ಶ್ರೀ ಎಂ.ವೀರಪ್ಪಮೊಯಿಲಿ : ಕರ್ನಾಟಕ ಆಗ್ರೋ ಕಾರ್ನ್ ಪ್ರಾಡೆಕ್ಟ್ ಪ್ರೈ ಲಿಮಿಡೆಡ್ ಮತ್ತು ಕೆ.ಎಸ್.ಎಂ.ಐ.ಸಿ. ಗಳು ಇಲ್ಲಿ ಕೆ. ಇಲ್ಲಿ ಕೆ. ಎಸ್.ಎಂ.ಐ.ಸಿ.ಯಲ್ಲಿ ನನಗೆ ತಿಳಿದ ಪ್ರಕಾರ ನಾನ್ ಅಫೀಶಿಯಲ್ ಚೇರ್‌ಮನ್ ಇಲ್ಲ. ಕರ್ನಾಟಕ ಆಗ್ರೋಕಾರ್ನ್ ಪ್ರಾಡಕ್ಟ್ ಪ್ರೈಲಿ.ನಲ್ಲಿ ನಾನ್ ಅಫಿಶೀಯಲ್ ಛೇರಮನ್ ಇದ್ದಾರೆ. ತಾವು ಏನು ಮಾಹಿತಿ ಕೊಟ್ಟಿದ್ದಾರೆ. ಅದಕ್ಕೆ ತನಿಖೆಗೆ ಆದೇಶ ಮಾಡುತ್ತೇನೆ. ಅದು ಏನೇ ಇದ್ದರೂ ಕೂಡ ತನಿಖೆ ಮಾಡಿ ಸರಿಯಾದಂತಹ ಒಂದು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರು ಬೆಳವಣಿಗೆ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎಂ.ವೀರಪ್ಪ ಮೊಯಿಲಿ : ಬೆಂಗಳೂರು ಬೆಳವಣಿಗೆ ಬಗ್ಗೆ ಕೇಳಿದಾಗ ನಾನು ತಿಳಿದುಕೊಂಡೆ ತಾವು ನನಗೆ ಅಭಿನಂದನೆ ಮಾಡುತ್ತೀರಿ ಎಂದು.

ಶ್ರೀ ವಾಟಾಳ್ ನಾಗರಾಜ್ : ನೀವು ಮುಂದಕ್ಕೆ ಮಾತನಾಡುವುದಕ್ಕೆ ಬಿಡಲಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ : ತಾವು ಅಭಿನಂದನೆ ಕೊಡಬೇಕು. ಬೆಂಗಳೂರು ಅಭಿವೃದ್ಧಿಗೆ ಹೆಚ್ಚು ಕಡೆ ನಾವು ಏನು ಇಟ್ಟಿದ್ದೀವಿ ಎಂದರೆ ನಮ್ಮ ಎಡಿಪಿ ಕಾರ್ಯಕ್ರಮದ ಪ್ರಕಾರ ಮೆಗಾಸಿಟಿ ಎಂದು ಒಂದು ಐಟಂ ಸೇರಿಸಿದ್ದೇವೆ. ನಂತರ ಮಾಸ್ ರ್‍ಯಾಪಿಡ್ ಸಿಸ್ಟಂ ಎಂದು ಮೆಟ್ರೊ ರೈಲ್ ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಆದುದರಿಂದ ಇಂತಹ ಯೋಜನೆಗಳೆಲ್ಲ ಬಂದಾಗ ಬೆಂಗಳೂರು ಬಹುಶಃ ಇಡೀ ವಿಶ್ವದಲ್ಲೇ ಅತ್ಯಂತ ಪ್ರಮುಖವಾದಂತಹ ನಗರವಾಗುತ್ತದೆ. ಆದರಲ್ಲಿ ಕುಡಿಯುವ ನೀರಿನ ಪ್ರಶ್ನೆ ಕೂಡ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಪದಗಳು ಜನಗಳಿಗೆ ನೋಡುವುದಕ್ಕೆ ಬಹಳ ಚೆನ್ನಾಗಿ ಇದೆ. ಬಾಂಬೆ ಶೋ ಎಂದು ಹಳ್ಳಿ ಕಡೆ ತೋರಿಸುತ್ತಾರೆ ಡಬ್ಬದಲ್ಲಿ. ಇಂದ್ರನ ಅರಮನೆ ನೋಡಿದ, ನೋಡಿದೆ ಸ್ವಾಮಿ, ಪಕ್ಕದಲ್ಲಿ ತಾಜ್ ಮಹಲ್ ನೋಡಿದ ಎಂದು ತೋರಿಸುತ್ತಾರೆ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರ ಸಮಸ್ಯೆ ವಲಸೆ, ಈಗ ನೀವು ಬೆಂಗಳೂರನ್ನು ಇನ್ನೂ ಸುಂದರ ಮಾಡಿದರೆ ಅವರ ಸಮಸ್ಯೆ ಉಲ್ಬಣವಾಗುತ್ತದೆ. ಆ ಕಾರಣ ಕೆಂಪೇಗೌಡ ಏನು ನಾಲ್ಕು ಗೋಪುರ ಕಟ್ಟಿದ್ದರೂ ಅದನ್ನು ನೆನಪು ಮಾಡಿಕೊಂಡು ತಾವು ಮೊದಲು ಬಿಡಿಎ ರದ್ದು ಮಾಡಿ. ಇದನ್ನು ಬಹಳ ದಿವಸದಿಂದ ಹೇಳುತ್ತಿದ್ದೇನೆ. ಬೆಂಗಳೂರನ್ನು ಏನು ಸುಂದರ ಮಾಡುತ್ತೀರಿ ನೀವು? ಬಾಂಬೆಯಲ್ಲೇ ಮೆಟ್ರೋ ಇಲ್ಲ. ನಿಮಗೆ ಏಕೆ ಬೇಕು ಮೆಟ್ರೋ?

ಶ್ರೀ ಎಂ. ವೀರಪ್ಪ ಮೊಯಿಲಿ : ಬೆಂಗಳೂರಿನಲ್ಲಿ ಇದ್ದ ನಾಗರೀಕರ ಜೀವನವಾದರೂ ಕೂಡ ಒಂದು ನೆಮ್ಮದಿಯಲ್ಲಿ ಇರುವ ಹಾಗೆ ನೋಡಬೇಕಲ್ಲ. ಈಗ ಆಗ್ರೋ ಕಾರ್ನ್ ಬಗ್ಗೆ ಯಾವುದೇ ಬೀಜ ಖರೀದಿ ಇರಬಹುದು ಅದನ್ನು

ಟೆಂಡರ್ ಕರೆದೇ ಮಾಡಿದ್ದಾರೆ. ಅವರು ಬಂದಮೇಲೆ ಟೆಂಡರ್ ಇಲ್ಲದೇ ಯಾವುದೇ ಒಂದು ಐಟಂ ಕೂಡ ತೆಗೆದುಕೊಂಡಿಲ್ಲ.

ರಾಜ್ಯಪಾಲರ ಅಡ್ರೆಸ್ ಬಗ್ಗೆ ಉತ್ತರ ಕೊಡುವಾಗ ಇನ್ನು ಹೆಚ್ಚಿನ ವಿವರ ಅದರಲ್ಲಿ ಕೊಡುತ್ತೇನೆ.

ಪೂರಕ ಅಂದಾಜುಗಳ (ಮೊದಲನೆಯ ಕಂತು)

ಅಧ್ಯಕ್ಷರು : ಈಗ ಅನುಪೂರಕ ಅಂದಾಜುಗಳ (ಮೊದಲನೇ ಕಂತು) ಚರ್ಚೆ ಮುಕ್ತಾಯವಾಯಿತು. ಈಗ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"31 -3-94 ಕ್ಕೆ ಪೂರ್ಣಗೊಳ್ಳುವ ಅನೂಪೂರಕ ಅನುದಾನ ಸಂಖ್ಯೆ 1 ರಿಂದ 6,8,10,13,15,22,24,25,31,34,35,,4042,43,48,552,53,54,55,58 ಮತ್ತು 60ಮೊದಲನೇ ಕಂತುಗಳನ್ನು ಸರ್ಕಾರದವರು ಸಭೆಯ ವೆಚ್ಚವನ್ನು ಸಂದಾಯ ಮಾಡುವಂತಾಗಲು ಪೂರಕ ಅನುದಾನ ಪಟ್ಟಿಯಲ್ಲಿ ಸೂಚಿಸಿದ ಮೊಬಲಗನ್ನು ಮೀರದಂತೆ ಇರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಪೂರಕ ಅಂದಾಜುಗಳ (ಎರಡನೇ ಕಂತು)

ಅಧ್ಯಕ್ಷರು : ಈಗ ಪೂರಕ ಅಂದಾಜುಗಳ (ಎರಡನೇ ಕಂತು) ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

"31-3-94 ಕ್ಕೆ ಕೊನೆಗೊಳ್ಳುವ ಪೂರಕ ಅನುದಾನ ಸಂಖ್ಯೆ 1,2,3,4,9,10,13,15,19,22,25,28,31,33,34 ,39,40,41,42,47,48,58,59 ಮತ್ತು 60 ಕ್ಕೆ ಸಂಬಂಧಿಸಿದ 2ನೇ ಕಂತುಗಳನ್ನು ಸರ್ಕಾರದವರು ವೆಚ್ಚವನ್ನು ಸಂದಾಯ ಮಾಡುವಂತಾಗಲು ಪೂರಕ ಅನುದಾನ ಪಟ್ಟಿಯಲ್ಲಿ ಸೂಚಿಸಿದ ಮೊಬಲಗನ್ನು ಮೀರದಂತೆ ಇರುವ ಮೊತ್ತವನ್ನು ಮಂಜೂರು ಮಾಡುವುದು".

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನೂ ಈ ಕೆಳಗೆ ನಮೂದಿಸಲಾಗಿದೆ.)

7.20 ಪಿ.ಎಂ.

1994ರ ಕರ್ನಾಟಕ ಧನ ವಿನಿಯೋಗ ವಿಧೇಯಕ

ಶ್ರೀ ಎಂ. ವೀರಪ್ಪಮೊಯ್ಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " 1994ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪಮೊಯ್ಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ 1994ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಬೆಯ ಮುಂದೆ ಮಂಡಿಸುತ್ತೇನೆ.